UNIVERSAL
LIBRARY
OU_200521
UNIVERSAL
LIBRARY

ಪ್ರತಿ ಎರಡು ತಿಂಗಳಿಗೊಮ್ಮೆ ಹೊರಡುವ

# ಭಾರತೀ ಗ್ರಂಥಮಾಲಾ

ಕಟಪಾಡಿ.

ಮಾಲೆ: ೧

ಮಣಿ: ೧

# ಬೆಳಕು

1 ಸಪ್ಟಂಬರ 1938.

ನಿರ್ದೇಶಕ:

ಕೆ. ಬಿ. ಸೀತಾರಾಮ ಧೊರೆ ಬಲ್ಲಾಳ.


ಸಂಪಾದಕ:

ಯಮ್. ಸಂಕಪ್ಪ ಹೆಗ್ಗಡೆ.

ಪ್ರಕಾಶಕ.

ರಾಮಕೃಷ್ಣ ಪುರಾಣಿಕ.



ಬಿಡಿ ಪ್ರತಿ ೧ಕ್ಕೆ: ರೂ. 0—4—0. ] [ ವಾರ್ಷಿಕ ಚಂದಾ ರೂ. 1—8—0.

ತುಳುನಾಡ್ ಛಾಪಖಾನೆ, ಉಡುಪಿ.

# ವಿ ಜ್ಞಾ ಪ ನೆ

**ಮಹನೀಯರುಗಳಲ್ಲಿ,**

ಪತ್ರಿಕೆಗಳ ಮತ್ತು ಗ್ರಂಥಗಳ ಸುರಿಮಳೆಯು ಈ ಕಾಲದಲ್ಲಿ ಇದೂ ಒಂದು ಗ್ರಂಥಮಾಲೆಯು ಜನ್ಮತಾಳಿದ್ದು ಆಶ್ಚರ್ಯವನ್ನುಂಟುಮಾಡುವುದು ಸಹಜವೇ. ಆದರೆ ಭಾರತದ ಜೀವಾಳದಂತಿರುವ ಹಳ್ಳಿಗಳ ಮೇಲ್ಮೆಗಾಗಿ ಹಳ್ಳಿಯಲ್ಲಿಯೇ ಇದ್ದ ಈ ಗ್ರಂಥಮಾಲೆಯ ಅಳಿಲ ಸೇವೆಯೂ ಸ್ವಲ್ಪಮಟ್ಟಿಗಾದರೂ ಅಗತ್ಯವಿದೆಯೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ. ಮಾತ್ರವಲ್ಲ, ನಮ್ಮಲ್ಲಿರುವ ಶ್ರೀಕಂಠ ವಾಚನಾಲಯದ ಅಭಿವೃದ್ಧಿಗಾಗಿ ಮಡಿಯುತ್ತಿರುವುದೂ ಇದರ ಮುಖ್ಯ ಉದ್ದೇಶವಿರುವುದರಿಂದ ವಿದ್ಯಾಭಿಮಾನಿಗಳೆಲ್ಲರೂ ಸಕಲವಿಧದಿಂದಲೂ ತುಂಬಾ ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇವೆ.

— **ಸಂಪಾದಕ.**

## ವಿಜ್ಞಾಪನೆ

# ಬರೆಹಗಾರರಲ್ಲಿ

ಹಿಂದೀಯ ಸಂಸ್ಕೃತಿ, ಹಳ್ಳಿಗಳ ಅಭಿವೃದ್ಧಿ, ಕನ್ನಡ ಭಾಷಾಸೇವೆಗಳಿಗೆ ಸಹಕಾರಿಯಾಗುವ ಕತೆ-ಕಾದಂಬರಿ-ನಾಟಕ-ಪದ್ಯ-ಪ್ರಬಂಧಗಳನ್ನು ಆಗ್ಗಿಂದಾಗ್ಗೆ ಕಳುಹಿಸುತ್ತಿದ್ದು ನಮ್ಮೊಡನೆ ತಾವೂ ಮಾತೃಭೂಮಿಯ ಸೇವೆಯನ್ನು ಮಾಡುತ್ತಿರಬೇಕಾಗಿ ಆಶಿಸುತ್ತೇವೆ. ಮುಂದಿನ ಸಂಚಿಕೆಯು ನವಂಬರ ಒಂದನೇ ತಾರೀಕಿಗೆ ಹೊರಡುವುದು.

—ಪ್ರಕಾಶಕ.

## ಈ ಸಂಗ್ರಹದಲ್ಲಿ
## ಕತೆಗಳು

ಪ್ರಿ . . . ಯಾ !
ನಿರ್ಮಲ ಪ್ರೇಮ
ಬುಕ್ ಬೈಂಡರ್

# ಪ್ರಿ......ಯಾ!

೧

“ನೋಡು ಮಾಧು! ಸಿನಗೆ ಬೇಡ! ನನ್ನ ಪುಸ್ತಕ ಕೆಳಗೆ ಬೀಳುತ್ತದೆ. ನಾನು ನಿನ್ನ ತಂದೆಯವರೊಡನೆ ಹೇಳುತ್ತೇನೆ!”

“ನನಗೆ ತೋರುವುದಿಲ್ಲ, ನಾನು ಹೀಗೆ ಕೈಬೀಸಿಕೊಂಡು ಹೋಗುತ್ತೇನಪ್ಪ! ಮಾಧವನು ಕಣ್ಣುಮುಚ್ಚಿಕೊಂಡು ಇನ್ನೊಮ್ಮೆ ಕೈಬೀಸಿ ನಡೆದು ರಮೆಗೆ ತಾಗಿದನು. ಅವನ ಕೈತಗಲಿ ರಮೆಯ ಪುಸ್ತಕಗಳೆಲ್ಲಾ ಚಲ್ಲಾಪಿಲ್ಲಿಯಾಗಿ ಕೆಳಗೆ ಬಿದ್ದವು. ಅವಳ ಎಡಕೈಯ ಬಳೆಗಳೆರಡು ಒಡೆದು ಚೂರಾದವು. ಈ ತಮಾಷೆಯನ್ನು ಕುತೂಹಲದಿಂದ ನೋಡುತ್ತಿದ್ದ ಹುಡುಗರೆಲ್ಲಾ ಚಪ್ಪಾಳೆ ಹೊಡೆದು ಗೊಳ್ಳೆಂದು ನಕ್ಕುಬಿಟ್ಟರು. ಮಾಧವನು ಹೆದರಿದವನಂತೆ ಬೆಪ್ಪಗೆ ನಿಂತುಕೊಂಡು, ಸಂಗಾತಿಗಳೆಲ್ಲಾ ಆವನನ್ನು ನೋಡಿ ನೋಡಿ ನಗುತ್ತಿದ್ದಾಗ ಆವನೂ ನೆಪಮಾತ್ರಕ್ಕೆ ಹಲ್ಲು ಬಿಡುತ್ತಿದ್ದನು! ರಮೆಯ ಕಣ್ಣುಗಳೆರಡೂ ತುಂಬಿಬಂದು ಕಣ್ಣೀರು ಕಪೋಲಗಳಲ್ಲಿ ಧಾರೆಯಾಗಿ ಕೆಳಗಿಳಿಯಿತು. ಆವಳ ಸಂಗಾತಿಯಾದ ಸರೋಜಿನಿಯು ರಮೆಯ ಕೈಯನ್ನು ಹಿಡಿದು ನೋಡಿ “ನೋಡು ಮಾಧಣ್ಣ! ಬಳೆಗಳನ್ನು ಒಡೆದೆಯಲ್ಲ! ನಿನಗೆ ತಂದೆಯವರೊಡನೆ ಹೇಳದೆ ಬಿಡುತ್ತೇವೋ ನೋಡು”ಎಂದು ಹೇಳಿ “ಬಾ, ಹೋಗುವ, ಅವನಿಗೆ ಸರಿ ಎರಡು ಪೆಟ್ಟು ಬೀಳಿಸಬೇಕು! ನಾನೂ ಹೇಳುತ್ತೇನೆ, ಪುಸ್ತಕಗಳು ಅಲ್ಲೇ ಇರಲಿ!” ಎಂದು ರಮೆಯನ್ನು ಸಮಜಾಯಿಸಿದಳು. ರಮೆಯು ಕಣ್ಣೀರನ್ನೊರಸಿಕೊಂಡು ಪುಸ್ತಕಗಳನ್ನು ಒಂದೊಂದಾಗಿ ಹೆಕ್ಕಿಕೊಳ್ಳುತ್ತಾ ನಡೆದಳು. ಮಾಧವನು ರಮೆಯ ದೀನಸ್ಥಿತಿಗೆ ಕನಿಕರಗೊಂಡಿದ್ದನು. ಅದಕ್ಕಿಂತಲೂ ಹೆಚ್ಚಾಗಿ, ತಾನು ಮಾಡಿದ ತಪ್ಪಿಗೆ ತಂದೆಯು ಶಿಕ್ಷಿಸುವನೆಂದು ಹೆದರಿ

ದ್ದನು. ರಮೆಯನ್ನು ಹೇಗಾದರೂ ಸಂತೈಸಬೇಕೆಂದು, ಅವಳ ಹಿಂದೆ ಹೋಗಿ "ರಮಾ! ಇಗೋ ನಿನಗೀ ಪೆನ್ಸಿಲು ಬೇಕೋ" ಎಂದು, ಹಿಂದೆ ರಮೆಯು ತನ್ನನ್ನು ಕಾಡಿದಾಗ ಕೊಡದಿದ್ದ ಪೆನ್ಸಿಲನ್ನು ಅವಳ ಮುಖದೆಡೆಗೆ ಹಿಡಿದನು. ರಮೆಯು ಅವನ ಕೈಯನ್ನು ದೂಡಿ ಮುನ್ನಡೆದುಬಿಟ್ಟಳು. ಪಾರಿಜಾತಸುಮವನ್ನು ಎಂದಿಗಿಂತಲೂ ಹೆಚ್ಚಾಗಿ ಕೊಯ್ದು ಕೊಡುವೆನೆಂದರೂ ಅವಳು ಕೇಳಲಿಲ್ಲ! ಸರೋಜಿನಿಯು ಅವುಗಳನ್ನು ಧಿಕ್ಕರಿಸಲು ಪ್ರೋತ್ಸಾಹಿಸುತ್ತಿದ್ದಳು. ಮಾಧವನು ನಿರುಪಾಯನಾಗಿ ಮನೆಗೆ ಹೋದವನೇ ಸ್ಲೇಟು ಪುಸ್ತಕಗಳನ್ನು ಕೆಳಗಿಟ್ಟು ಆಡಲಿಕ್ಕೆ ಓಡಿದನು. ಸ್ವಲ್ಪ ಹೊತ್ತಿನಲ್ಲಿ "ಮಾಧೂ! ಮಾಧೂ!" ಎಂದು ತನ್ನ ತಂದೆಯು ಕೂಗಿದುದನ್ನು ಕೇಳಿ ಮನೆಗೆ ಓಡಿಬಂದನು! ಅಲ್ಲಿ ತಂದೆಯು ರಮೆಯ ಕೈಹಿಡಿದುಕೊಂಡು ನಿಂತಿರುವುದನ್ನೂ, ಸರೋಜಿನಿಯೂ ಬಳಿಯಲ್ಲಿರುವುದನ್ನೂ ನೋಡಿ ಆತನು ಬೆಪ್ಪಾದನು.

"ಮಾಧು ನೀನು ಶಾಲೆಯಿಂದ ಬರುವಾಗ ರಮೆಯನ್ನು ದೂಡಿದೆಯೋ? ಸತ್ಯ ಹೇಳು."

"ಇಲ್ಲ, ನಾನು ಹೀಗೆ ಬರುವಾಗ ನನ್ನ ಕೈ ಆವಳಿಗೆ ತಾಗಿ ಪುಸ್ತಕಗಳು ಕೆಳಗೆ ಬಿದ್ದವು, ನಾನು ನೋಡಿರಲಿಲ್ಲ."

"ನೀನು ನೋಡಿರಲಿಲ್ಲವೋ? ಅವಳು ಮೂರು ಮೂರು ಸಲ ಹೇಳುವಾಗ ಕೇಳದೆ ದೂಡಿ, ಈಗ ಸುಳ್ಳು ಹೇಳುತ್ತೀಯೋ?" ಎಂದು ಸರೋಜಿನಿಯು ಗದರಿಸಿದಳು!

ಕೇಶವರಾಯನು ವಿನೋದಪ್ರಿಯನು. ಎಳೆಮಕ್ಕಳ ತಾತ್ಕಾಲಿಕ ಜಗಳಗಳೆಂದರೆ ಅವನಿಗೆ ಬಹು ವಿನೋದ! ರಾಯನಿಗೆ ರಮೆಯ ಮೇಲೆ ಪುತ್ರಿ ಸರೋಜಿನಿಯಷ್ಟೇ ಪ್ರೇಮ! ಆತನು ನಗುತ್ತಾ "ಹೌದೋ, ರಮಾ? ಮಾಧವನು ನಿನ್ನನ್ನು ನೋಡಿದ್ದನೋ ಇಲ್ಲವೋ?" ಎಂದವಳ ಮುಖದ ಕಡೆಗೆ ಬಗ್ಗಿದನು. ತಾನೂ ಸರೋಜಿನಿಯೂ ಮಾತನಾಡುತ್ತಾ ನಿಂತಿದ್ದಾಗ, ಮಾಧವನು ಬಂದು ದೂಡಿದೊಡನೆ ತಾನು ಪುಸ್ತಕ ಕೆಳಗೆ ಬೀಳು

ತ್ತದೆಂದು ಎಚ್ಚರಿಸಿದೆನೆಂದೂ, ಅವನು ಕೇಳದೆ ಪುನಃ ಕಣ್ಣುಮುಚ್ಚಿ ಕೊಂಡು ಬೇಕೆಂದೇ ಕೈತಗಲಿಸಿ ಪುಸ್ತಕಗಳನ್ನು ಕೆಳಗೆ ಬೀಳಿಸಿ ಬಳೆಗಳನ್ನು ಒಡೆದನೆಂದೂ ಹೇಳುವಾಗ ಆವಳ ಕಣ್ಣುಗಳು ತುಂಬಿಬಂದವು ಕೇಶವ ರಾಯನು ಆಕೆಯ ಗಲ್ಲವನ್ನಲುಗಾಡಿಸಿ "ಮಾಧು! ಒಳ್ಳೆಯ ಮಾತಿನಿಂದ ಆವಳ ಬಳೆ ತಂದು ಕೊಟ್ಟೇ ಆಯಿತು, ಇಲ್ಲವಾದರೆ ಈಗಲೇ ಈಕೆಯ ಕೈಯಿಂದ ನಿನಗೆ ಎರಡು ಪೆಟ್ಟು ಕೊಡಿಸುತ್ತೇನೆ! ಏನು ಮಾಡುವಿ ಹೇಳು"? ಎಂದನು.

"ಇಲ್ಲ! ನಾನು ನೋಡಿರಲಿಲ್ಲ! ನಾನು ಹೀಗೆ ಹೋಗುವಾಗ ನನ್ನ ಕೈತಗಲಿದ್ದಷ್ಟೆ".

ಮಾಧವನು ಬಹು ಚುರುಕಾದ ಹುಡುಗನು. ಆತನು ತನ್ನ ಮಾತಿನ ಯಥಾರ್ಥತೆಯನ್ನು ರುಜುಪಡಿಸುವುದಕ್ಕಾಗಿ ಕೈಬೀಸಿ ನಡೆದು ರಮೆಗೆ ತಗಲಿಸಿ ತಾನು ಹೀಗೆ ನೋಡದೆ ಹಾಗಿರುವಾಗ ಆವಳ ಪುಸ್ತಕಗಳು ಕೆಳಗೆ ಬಿದ್ದವೆಂದೂ ಸ್ಲೇಟಿನ ಅಂಚು ತಗಲಿ ಬಳೆಗಳು ಒಡೆದವೆಂದೂ ಸುಳ್ಳೇ ಹೇಳಿ ರಾಯನನ್ನು ನೋಡುತ್ತಾ ನಿಂತನು. ಆವನ ಅಭಿನಯ ವನ್ನು ನೋಡಿ ರಮೆಗೆ ಫಕ್ಕನೆ ನಗುಬಂತು. ಮಾಧವನ ದೀನತೆಯನ್ನೂ ಕಪಟ ನಟನೆಯ ಮನೋಹರತೆಯನ್ನೂ ಕಂಡು ಕೇಶವರಾಯನು ಮುಗುಳು ನಗುತ್ತಾ, ರಮೆಯೊಡನೆ "ಇಗೋ ಅವನು ಎರಡು ಬಳೆ ಒಡೆದುದಕ್ಕೆ ನೀನು ಈ ಬೆತ್ತದಿಂದ ಎರಡು ಪೆಟ್ಟುಕೊಡಬೇಕು" ಎಂದು ಬೆತ್ತವನ್ನು ತೋರಿಸಿದನು. ರಮೆಯು ತುಸು ನಾಚಿ, ಕೇಶವರಾಯನ ಕೈಯನ್ನು ದೂಡಿದಳು. "ಹಾಗಾದರೆ ನಿನಗೆ ಇವನನ್ನೇ ಗಂಡನನ್ನಾಗಿ ಮಾಡುವ, ಆದಾದೀತೇ" ಎಂದು ವಿನೋದಗೊಂಡು ಆವಳ ಮುಖವನ್ನು ತಿರುಗಿಸಲು ಅವಳು ಇನ್ನಷ್ಟು ನಾಚಿ, ತನ್ನ ತಲೆಯನ್ನು ಕೇಶವರಾಯನ ಎದೆಗೆ ಒತ್ತಿದಳು. "ಹೌದು ರಮಾ! ಹಾಗೆಯೇ ಮಾಡುವಾ! ಬಳೆ ಒಡೆದವನೇ ಮತ್ತೆ ಬಳೆ ತೊಡಿಸಲಿ ನೋಡುವ"ಎಂದು ಪರಿಹಾಸ್ಯಮಾಡು ತ್ತಿರಲು ರಮೆಯು ಆವನ ಕೈಗಳಿಂದ ಬಿಡಿಸಿಕೊಂಡು ಮನೆಯೊಳಗೆ ಓಡಿ

ಬಿಟ್ಟಳು. "ನೀನು ಈಗ ದೊಡ್ಡ ತಂಟೆಖೋರನಾಗಿದ್ದಿ. ಇನ್ನು ಯಾರಿಗಾದರೂ ಅನ್ಯಾಯಮಾಡಿದ್ದನ್ನು ಕೇಳಿದರೆ ಬೆನ್ನಿನ ಚರ್ಮವನ್ನೆಲ್ಲಾ ಸುಲಿಯುತ್ತೇನೆ ನೋಡು. ನಡಿ ಒಳಗೆ!" ಎಂದು ಕೇಶವರಾಯನು ಮಗನನ್ನು ಗದರಿಸಿದನು. ಎಲ್ಲಿ ಪೆಟ್ಟು ಬೀಳುವುದೋ ಎಂದು ನಡುಗುತ್ತಿದ್ದ ಮಾಧವನು ಸಂತೋಷದಿಂದ ಒಳಗೆ ಓಡಿದನು. ಅಲ್ಲಿ ತನ್ನ ತಾಯಿಯ ತೊಡೆಯಲ್ಲಿ ಕುಳಿತಿದ್ದ ರಮೆಯನ್ನು ಕಂಡು "ತಡಿ ರಮಾ! ತಂದೆಯವರೊಡನೆ ಹೇಳಿದೆಯಲ್ಲ, ನಿನಗೆ ಇನ್ನು ಪಾರಿಜಾತ ಕೊಯ್ದು ಕೊಡುತ್ತೇನೋ ನೋಡು! ಲೆಕ್ಕದ ಉತ್ತರ ತೋರಿಸುತ್ತೇನೋ ನೋಡು" ಎಂದು ಬೆರಳನ್ನೆತ್ತಿ ಅಣಕಿಸಿದನು..

"ಬೇಡ ನೀನು ತೋರಿಸುವುದು! ನನ್ನ ಬಳೆಯನ್ನೇಕೆ ಒಡೆದೆ? ನನಗೆ ತಾಯಿ ಗದರಿಸುತ್ತಾಳಲ್ಲ!"

" ಹಾಗಾದರೆ ಇನ್ನು ನೀನು ನನ್ನೊಂದಿಗೆ ಮಾತನಾಡಬಾರದು! ಇಂದಿನಿಂದ ನಿನಗೂ ನನಗೂ ಕೋಪ!"

"ಕೋಪ ಆಗಲಿ! ನೀನೂ ನನ್ನೊಡನೆ ಮಾತನಾಡಬಾರದು"

## ೨

ಕೇಶವರಾಯರೂ, ನರಹರಿರಾಯರೂ ನೆರೆಕರೆಯವರು. ಐಶ್ವರ್ಯ, ಗುಣ, ನಡತೆಗಳಲ್ಲಿ ಸಮಾನಸ್ಕಂಧರಾಗಿದ್ದುದರಿಂದ ಪರಸ್ಪರರಲ್ಲಿ ಹೆಚ್ಚಿನ ಪ್ರೇಮಬಳಕೆಗಳಿದ್ದುವು. ಅವರ ಪತ್ನಿಯರಲ್ಲಿಯೂ ಸಹೋದರೀ ವಾತ್ಸಲ್ಯವಿದ್ದು, ಬಹು ಅನ್ಯೋನ್ಯತೆಯಿದ್ದಿತು. ನರಹರಿರಾಯನಿಗೆ ರಮೆಯು ಓರ್ವಳೇ ಮಗಳಾಗಿದ್ದರೆ, ಕೇಶವರಾಯನಿಗೆ ಮಾಧವನು ಏಕಮಾತ್ರ ಪುತ್ರನು. ರಮೆಯೂ ಮಾಧವನೂ ಚಿಕ್ಕಂದಿನಿಂದಲೂ ಎಣೆವಕ್ಕಿಗಳಂತೆ ಜತೆಯಲ್ಲಿಯೇ ಬೆಳೆದವರು. ಆಟ, ಪಾಟ, ಊಟ, ವಿನೋದಗಳಲ್ಲಿ ಒಬ್ಬರನ್ನೊಬ್ಬರು ಅಗಲಿರಲಾರರು. ಸಂಜೆ ಶಾಲೆ ಬಿಟ್ಟಾಗ ಹತ್ತಿರದ ಮರಹತ್ತಿ ಪಾರಿಜಾತ ಹೂವನ್ನು ಕೊಯ್ದು ರಮೆಗೆ

ಕೊಡದೆ ಮಾಧವನು ಮನೆಗೆ ಹೋಗುತ್ತಿರಲಿಲ್ಲ. ಉಪಾಧ್ಯಾಯರ ಪೆಟ್ಟನ್ನು ತಪ್ಪಿಸಿಕೊಳ್ಳಬೇಕಾದರೆ, ರಮೆಯು ಮಾಧವನಿಂದ ಪಾಠ ಲೆಕ್ಕಗಳನ್ನು ಕಲಿತುಕೊಳ್ಳಬೇಕಾಗಿದ್ದಿತು. ಮಾಧವನು ಉಪಾಧ್ಯಾಯ ರಿಂದ ಪೆಟ್ಟು ತಿನ್ನುವುದನ್ನು ಕಂಡರೆ ಅವಳ ಕಣ್ಣುಗಳಲ್ಲಿ ನೀರು ತುಂಬು ತ್ತಿದ್ದಿತು ಮಾಧವನು ಬಲುತುಂಟ ಹುಡುಗನು. ಆತನು ಹುಡುಗರಿ ಗೆಲ್ಲಾ ಪುಂಡುಗುರುವಾಗಿದ್ದು, ಅಧ್ಯಾಪಕರಿಂದ ಅನೇಕ ತಡವೆ ಪೆಟ್ಟು ತಿನಬೇಕಾಗುತ್ತಿದ್ದಿತು! ಆದರೆ ಶಾಲೆ ಬಿಟ್ಟೊಡನೆ ಅದನ್ನು ಮರೆತು, "ರಮಾ! ಬಾ, ಪಾರಿಜಾತ ಕೊಯ್ಯುವ!" ಎಂದೋಡುತ್ತಿರುವ ಅವನನ್ನು ನಿಲ್ಲಿಸಿ, ಪೈ ಕೈಗಳ ಪೆಟ್ಟನ್ನು ನೋಡಿ ರಮೆಯು ಮನಕರಗುತ್ತಿದ್ದಳು! ಆಟ, ಓಟಗಳಲ್ಲಿ ಮಾಧವನನ್ನು ಗೆಲ್ಲುವ ಹುಡುಗರಿದ್ದಿಲ್ಲ. ಒಮ್ಮೆ ಯಾರಾದರೂ ಜೈಸಿಬಿಟ್ಟರೆ, ಕೊನೆಯ ಗುದ್ದಾಟದಲ್ಲಿಯಾದರೂ ಅವನನ್ನು ಸೋಲಿಸದೆ ಮಾಧವನು ಬಿಡುತ್ತಿರಲಿಲ್ಲ! ಒಮ್ಮೊಮ್ಮೆ ಮಾಧವನ ಒತ್ತಾಯದಿಂದ ರಮೆಯೂ ಅವನೊಡನೆ ಪಂಥಹಾಕಿ ಓಡುವುದಿದೆ; ಆದರೆ ಮಧ್ಯದಲ್ಲೇ ನಿಂತುಬಿಟ್ಟು, ಉಸಿರುಕಟ್ಟಿ ಓಡುತ್ತಿರುವ ಮಾಧವ ನನ್ನು ನೋಡಿ ಅವಳು ಗಹಗಹಿಸಿ ನಗಲು ತೊಡಗಿದಾಗ, ಹಿಂದಿರುಗಿ ನೋಡಿ 'ಓಹೋ! ನೀನು ಸೋತೆ!' ಎಂದು ಚಪ್ಪಾಳೆ ಹೊಡೆದು ಮನೆಯ ವರೆಗೂ ಹಂಗಿಸುತ್ತಾ ಹೋಗುತ್ತಿದ್ದನು. ಒಮ್ಮೊಮ್ಮೆ ಮಾಧವನು ರಮೆಯ ಲಂಗಕ್ಕೆ ಮುಳ್ಳೆರಚಿಯೋ, ಶಾಯಿಚೆಲ್ಲಿಯೋ ಅವಳು ಅಳುವಂತೆ ಮಾಡಿ ವಿಜಯ ಗರ್ವದಿಂದ ಹಿಗ್ಗುವುದಿತ್ತು! ರಮೆಯ ಅಳುವಾಗಲೀ ಮಾಧವನ ಪುಂಡಾಟಿಕೆಯಾಗಲೀ ಹೆಚ್ಚುಕಾಲವಿರದೆ ಮರುಕ್ಷಣದಲ್ಲಿಯೇ ಅವರು ಒಂದಾಗಿಬಿಡುತ್ತಿದ್ದರು.

ಈ ದಿನದ ಜಗಳದಲ್ಲಿ ಮಾತ್ರ ಹಾಗಲ್ಲ. ತಂದೆಯೊಡನೆ ಹೇಳಿ ಗದರಿಕೆ ಹಾಕಿಸಿದಳಲ್ಲಾ ಎಂದು ಮಾಧವನಿಗೆ ಸಿಟ್ಟು! ಎಷ್ಟು ಸಲ ಹೇಳಿದರೂ ಕೇಳದೆ ಬೇಕೆಂದೇ ಬಳೆಗಳನ್ನು ಒಡೆದನಲ್ಲಾ ಎಂದು ಅಂದು ರಮೆಗೆ ಮುನಿಸು! ಮಾತ್ರವಲ್ಲ "ನಿನ್ನೊಡನೆ ಕೋಪ" ಎಂಬ

ಮಾಧವನ ಕೊನೆಯ ತೀರ್ಮಾನಕ್ಕೆ ರಮೆಯು ಸೈಗುಟ್ಟಿಯೂ ಆಗಿದೆ! ಹೀಗಾಗಿ ಅವರ ಅಂದಿನ ಜಗಳವು ಇಬ್ಬರ ಎಳೆ ಬುದ್ಧಿಯಲ್ಲಿಯೂ ಒಂದು ವಿಧದ ಸ್ವಾಭಿಮಾನವನ್ನು ಹುಟ್ಟಿಸಿದ್ದಿತು. ಮಾಧವನೇ ಮೊದಲು ಮಾತನಾಡಬೇಕೆಂದು ರಮೆಯೂ ಅವಳಾಡಬೇಕೆಂದು ಮಾಧವನೂ ಹಠಹಿಡಿದಿದ್ದರು! ರಮೆಗೆ ಮಾಧವನಿಂದಾಗಬೇಕಾದ ಸಹಾಯವು ಬಹಳ. ಪಾಠ ಪ್ರಶ್ನೆಗಳ ಉತ್ತರ, ಬರೆಯಲು ಶಾಯಿ, ಲೇಖನಿಗಳು ಮಾಧವ ನಿಂದ ಅವಳು ಪಡೆಯಬೇಕಾಗಿದ್ದಿತು! ಅದನ್ನು ಮಾಧವನೊಡನೆ ಕೇಳುವ ಬಗೆ ಹೇಗೆ? ಮಾಧವನಂತೂ ರಮೆಯನ್ನು ಅಣಕಿಸಲಿಕ್ಕಾಗಿ ಅವಳ ಕಣ್ಣೆದಿರಿನಲ್ಲೇ ಇತರ ಹುಡುಗಿಯರಿಗೆ ಹೂಗಳನ್ನು ಕ್ಕೊಯ್ದು ಕೊಡುತ್ತಿದ್ದನು. ಅವಳು ತನ್ನ ನಿತ್ಯ ಹಕ್ಕಿನದಾಗಿದ್ದ ಆ ಕುಸುಮ ಗಳನ್ನು ಸರೋಜಿನಿಯಿಂದ ಬೇಡಿ ಪಡೆಯಬೇಕಾಗಿದ್ದಿತು. ಅದಕ್ಕಾಗಿ ಮಾಧವನಂತೆ ಇತರ ಹುಡುಗರನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಅವಳಿಗಿಷ್ಟವಿರಲಿಲ್ಲ. ರಮೆಯನ್ನು ಯಾವುದಾದರೊಂದು ವಿಧದಿಂದ ಅಣಕಿಸಿ, ಅವಳ ಬಾಡಿದ ಮುಖವನ್ನು ನೋಡಿ ತೃಪ್ತಿಪಡುವುದೇ ಮಾಧವನ ಧ್ಯೇಯ! ಪರಾಜಯವನ್ನೊಪ್ಪಿಕೊಂಡು ರಮೆಯು ತನ್ನ ಶರಣಾಗತಳಾಗಲಪೇಕ್ಷಿಸುವ ಯಾವುದಾದರೊಂದು ಕುರುಹನ್ನು ಕಂಡರೆ ಅವನಿಗತ್ಯಾನಂದವಾಗುತ್ತಿದ್ದಿತು. ಅವಳು ಶಾಯಿ, ಲೇಖನಿಗಾಗಿ ಸರೋಜಿನಿಯನ್ನು ಕಾಡುವುದು, ಹುಡುಗಿಯರಿಗೆ ಹೂವಿನ ಮಾಲೆ ಮಾಡಲು ಸಹಾಯಮಾಡಿ ಪ್ರತಿಫಲವಾಗಿ ಕೆಲವು ಹೂಗಳನ್ನು ಪಡೆದು ಅಷ್ಟರಿಂದಲೇ ತೃಪ್ತಿಹೊಂದುವುದು, ಲೆಕ್ಕಗಳನ್ನು ಮಾಡಿಕೊಡಲು ಸರೋಜಿನಿಯ ಮೂಲಕ ತನ್ನನ್ನು ಬೇಡುವದು ಮೊದಲಾದ ವಿದ್ಯಮಾನ ಗಳು ಮಾಧವನಿಗೆ ಆನಂದದಾಯಕವಾಗುತ್ತಿದ್ದವು. ಆದರೆ ತನ್ನಿಂದ ತಿರಸ್ಕರಿಸಲ್ಪಟ್ಟು ಅವಳು ದೈನ್ಯದಿಂದ ಕಣ್ಣೀರಿಡುತ್ತಿದ್ದರೆ, ಅವನು ಪಶ್ಚಾತ್ತಾಪಗೊಂಡು ಬೇರೆ ವಿಧದಿಂದ ಸಂತೈಸಲು ಯತ್ನಿಸುತ್ತಿದ್ದನು. ಕಾಲಕಳೆದಂತೆ ಮಾಧವನ ಉಗ್ರಟತನದಿಂದ ರಮೆಯು ಬಿಡುಗಡೆ

ಹೊಂದಿದಂತೆ ತೋರಿ ಅವರಿಬ್ಬರ ಹೃದಯಗಳಲ್ಲಿಯೂ ಪರಸ್ಪರ ಗೂಢ ಸಂಬಂಧದ ಛಾಯೆಯು ಬೀಳತೊಡಗಿತು. ವರುಷಗಳು ಒಂದರ ಹಿಂದೊಂದರಂತೆ ಉರುಳಿ ಬಿದ್ದು ಮಾಧವನ ಪ್ರಾಥಮಿಕ ವಿದ್ಯಾಭ್ಯಾಸವು ಮುಗಿದು ಹೆಚ್ಚಿನ ಶಿಕ್ಷಣಕ್ಕಾಗಿ ಪರ ಊರಿಗೆ ಹೋಗಬೇಕಾಗಿ ಬಂತು. ರಮೆಯೂ ಆಗ ಶಾಲೆ ಬಿಟ್ಟಿರಲಿಲ್ಲ. ಮಾಧವನು ಹೊರಡುವ ದಿನ ರಮೆಯು ತನ್ನ ತಾಯಿಯ ಮಗ್ಗುಲಲ್ಲಿ ಕೇಶವರಾಯನ ಮನೆಯಲ್ಲೇ ನಿಂತಿದ್ದಳು! ಅವನು ರಮೆಯ ತಾಯಿಯನ್ನು ಬೀಳ್ಕೊಳ್ಳುವಾಗ, ಅವರಿಬ್ಬರ ಕಣ್ಣುಗಳೂ ಸಮ್ಮಿಳಿತವಾದವು! ಸರಳಪ್ರೇಮದೊಡನೆ ಆವುದೋ ಒಂದು ಹೊಸ ಛಾಯೆ ಬೆರೆತಂತಿದ್ದ ರಮೆಯ ವದನಾರವಿಂದವು ಮಾಧವನ ಮುಖದಲ್ಲಿ ಪ್ರತಿಬಿಂಬಿಸಿದಂತಾಗಿ, ಜತೆಗೂಡಿದ ಹೃದಯ ವನ್ನು ಆಯಾಸದಿಂದ ಅಗಲಬಿಟ್ಟು ಮಾಧವನು ಅಲ್ಲಿಂದ ಹೊರಟನು.

೩

ವರುಷಗಳು ಒಂದೊಂದಾಗಿ ಸರಿದುಹೋದವು. ಮಾಧವನು ತನ್ನ ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿ ಮನೆಗೆ ಈ ದಿನ ಬಂದಿದ್ದನು. ಅವನ ಆಗಮನವು ಅನಿರೀಕ್ಷಿತವಾಗಿರಲಿಲ್ಲ. ತಂದೆತಾಯಿಗಳು ಮಗನನ್ನು ಪ್ರೇಮದಿಂದ ಇದಿರುಗೊಂಡು ಸತ್ಕರಿಸಿದರು. ಮಾಧವನು ಮನೆಯ ಯೋಗಕ್ಷೇಮಗಳನ್ನು ವಿಚಾರಿಸಿ, ಫಲಾಹಾರವನ್ನು ಮುಗಿಸಿ ತುಸು ಹೊತ್ತನ್ನು ವಿವಿಧ ಕಾಲಕ್ಷೇಪಗಳಲ್ಲಿ ಕಳೆದನು. ಆಮೇಲೆ ಚಿಕ್ಕಂದಿ ನಿಂದಲೂ ತನಗೆ ಆನಂದಭವನದಂತಿದ್ದ ನರಹರಿರಾಯನ ಮನೆಗೆ ಹೊರಡ ಲನುವಾದನು. ಕೇಶವರಾಯನಿಗೂ, ನರಹರಿರಾಯನಿಗೂ ಕಾರಣಾಂತರ ಗಳಿಂದ ವೈಷಮ್ಯವುಂಟಾಗಿ, ಅದು ಪ್ರಬಲವಾಗುತ್ತಾ ಬರುತ್ತಿದ್ದಿತು! ಮಾಧವನ ಸರಳಸ್ವಭಾವ, ವಿದ್ವತ್ತು, ಲೋಕವ್ಯವಹಾರಜ್ಞಾನಗಳು ಮಾತ್ರ ಇವುಗಳಿಗೆಡೆ ಕೊಡಲಿಲ್ಲ. ಅವನು ಬರುತ್ತಿರುವಾಗ, ಬಾಲಲೀಲೆ ಗಳ ಒಂದೊಂದೇ ಸ್ಮರಣೆಯು ಹೃದಯದಲ್ಲಿ ಮೂಡಹತ್ತಿತು. ರಮೆಯ

ಕೋಮಲಸ್ವಭಾವ, ಸೌಂದರ್ಯ, ನಡೆನುಡಿಗಳ ಅವಶೇಷ ಮಾತ್ರ ಆತನ ಹೃದಯದಲ್ಲಿ ಉಳಿದಿದ್ದರೂ, ಆ ತರುಣ ಹೃದಯದಲ್ಲಿ ಅವಲ್ಲದೆ ಮಿಕ್ಕವುಗಳಿಗೆ ಶಾಶ್ವತಸ್ಥಾನವಿರಲಿಲ್ಲ "ಆಕೆಯು ಆಗ ತನ್ನ ಆಶ್ರಯವನ್ನು ಹೊಂದಲು ಆತುರಿಸುತ್ತಿದ್ದಂತೆ ಈಗಲೂ ಇರುತ್ತಿದ್ದರೆ ಎಂತಹ ಆನಂದ!" ಎಂದವನು ಹರ್ಷಪುಲಕಿತನಾಗುತ್ತಿದ್ದನು. ತನ್ನ ಪ್ರೇಮವು ಆಗಾಗ ತೋರಿಯಡಗುವಂತಿದ್ದು, ರಮೆಯು ಅದಕ್ಕೆ ಬದಲಾಗಿ ತನ್ನ ಶಾಶ್ವತ ಪ್ರೇಮವನ್ನಿತ್ತಿದ್ದಾಳೆಂಬುದು ಈಗ ಅವನ ಜ್ಞಾಪಕಕ್ಕೆ ಬಂದಿತು! ತನ್ನ ತುಂಟತನಗಳ ಪರಿಣಾಮವಾಗಿ ಕಣ್ಣೀರಿಡುತ್ತಿದ್ದ ರಮೆಯ ಮನೋಹರಮೂರ್ತಿ, ತಾನು ಮನೆಬಿಡುವಾಗ ತನ್ನನ್ನು ದಿಟ್ಟಿಸಿದ ಅವಳ ದುಃಖಪೂರ್ಣ ದೃಷ್ಟಿಗಳು ಮಾಧವನ ದೃಷ್ಟಿಪಥದಲ್ಲಿ ಅವತರಿಸಿದಂತೆ ಭಾಸವಾಯಿತು. ತಮ್ಮ ಒಂದು ದಿನದ ಕಲಹದ ಪರಿಣಾಮವಾಗಿ ಆ ತನಕ ತಾವು ಅನುಭವಿಸುತ್ತಿದ್ದ ಗೂಢ ಪ್ರೇಮಾನಂದವು ಸ್ವರ್ಗತುಲ್ಯವಾಗಿ ತೋರಹತ್ತಿತು. ಮಾಧವನು ಸ್ವಾನಂದಸಾಮ್ರಾಜ್ಯದಲ್ಲಿ ಓಲಾಡುತ್ತಾ ಮುಂದುವರಿದನು. ನರಹರಿರಾಯನ ಮನೆಯ ಮೆಟ್ಟಲನ್ನು ಹತ್ತುತ್ತಿರುವಾಗಲೇ ಒಳಗೆ ರಮೆಯು ಹೊರತು ಇನ್ನಾರೂ ಇಲ್ಲವೆಂಬುದನ್ನು ಊಹಿಸಿಕೊಂಡನು. ಆರಾಮಕುರ್ಚಿಗೊರಗಿಕೊಂಡಿದ್ದ ರಮೆಯು ಥಟ್ಟನೆ ಎದ್ದು, ಕುರ್ಚಿಯನ್ನು ಮುಂದಕ್ಕೆ ಸರಿಸಿ ಮಾಧವನು ಚಾವಡಿ ಹತ್ತುವುದರೊಳಗಾಗಿ ಒಳಗೆ ಹೋಗಿಬಿಟ್ಟಳು! ಪ್ರೇಮದ ಆಹ್ವಾನವನ್ನು ಕೊಡುತ್ತಿದ್ದ ಅವಳ ಪ್ರಬುದ್ಧ ವದನಾರವಿಂದವನ್ನು ಮಾಧವನು ನೋಡಿಬಿಟ್ಟುದರಿಂದ, ಈ ಅನಾದರದೊಳಗಿನ ಅಮೃತಕಣಗಳು ಆತನಿಗೆ ಬಹು ರುಚಿಯಾಗಿ ತೋರಹತ್ತಿದವು. ಆಕೆಯು ಒಳಗೆ ಹೋದವಳು ಇನ್ನೊಂದು ಬಾಗಿಲಿನಿಂದ ಆಳನ್ನು ಕೂಗತೊಡಗಿದಳು. ಸ್ವಲ್ಪ ಹೊತ್ತಿನಲ್ಲಿ ಆಳು ಬಂದು ಮಾಧವನೊಡನೆ ಯೋಗಕ್ಷೇಮಗಳನ್ನು ವಿಚಾರಿಸತೊಡಗಿದನು. ಮಾಧವನು ಪ್ರಶ್ನೋತ್ತರಗಳಲ್ಲಿ ಅಲಸಿಕೆಯನ್ನು ತೋರಿಸಲಿಲ್ಲ. ಆದರೆ ಅವನ ಉತ್ತರಗಳು ತಮ್ಮನ್ನು ಆಮಂತ್ರಿಸುತ್ತಿರುವ ಅದೊಂದು ಹೃದಯವನ್ನು ಸ್ಪರ್ಶಿಸಲು ಮರೆಯಲಿಲ್ಲ.

ತಮ್ಮಿಬ್ಬರ ಸಂಭಾಷಣೆಯಲ್ಲಿ ತನ್ನವುಗಳ ಸಾರವನ್ನು ಹೀರಲಪೇಕ್ಷಿಸುವ ಗುಪ್ತ ಅಪೇಕ್ಷೆಯೊಂದು ಹೊಂಚುತ್ತಿರುವುದೆಂಬುದನ್ನು ಅರಿತಿದ್ದ ಮಾಧವನು ಅದರ ಕಡೆಗೆ ಅಲಕ್ಷ್ಯನಾಗಿರಲಿಲ್ಲ. ಅಷ್ಟರಲ್ಲಿ ನರಹರಿರಾಯನು ಒಳಗೆ ಬರುತ್ತಾ 'ಓಹೋ! ಮಾಧವನೇ! ಯಾವಾಗ ಬಂದೆ? ಬಾಯಾರಿಕೆ ಯಾಗುವದೇ?' ಎಂದು ಅಂಗಿಯ ಗುಂಡಿಗಳನ್ನು ಕಳಚಲು ತೊಡಗಿದನು. ಮಾಧವನು ನಗುತ್ತಾ "ಆಗತಾನೇ ಬಂದೆ! ಬಾಯಾರಿಕೆಯೊಂದು ಬಂದಾಗಲೇ ಆಗಿದ್ದಿತು" ಎಂದನು. ಇಲ್ಲಿ ರಮೆಯು ತನ್ನ ಪ್ರಮಾದವನ್ನರಿತು ಕೊಂಡಳು. ತನ್ನ ತಪ್ಪನ್ನೆಚ್ಚರಿಸುವ ಅವನ ಸ್ವಭಾವವು ಪೂರ್ವ ಪರಿಚಯವಿದ್ದುದರಿಂದ, ಅವಳಿಗೆ ಹಿಂದಿನ ಮಾಧುರ್ಯವು ಇಂದು ವಿವೇಕದುಡಿಗೆಯಿಂದ ಕಂಗೊಳಿಸುವುದನ್ನು ಕಂಡು ಆನಂದವಾಯಿತು. 'ಬಾಯಾರಿಕೆಯೊಂದು ಬಂದಾಗಲೇ ಆಗಿದ್ದಿತು.' ಎಂಬ ಮಾತಿನಲ್ಲಿ ತಪ್ಪನ್ನೆಚ್ಚರಿಸುವ ಅಧಿಕಾರ ಚಿನ್ಹೆಯು ತೋರಿ, ಅದರ ಸೌಂದರ್ಯಕ್ಕಾಗಿ ಅವಳು ಹಿಗ್ಗಿದಳು. "ಏನು? ಬಾಯಾರಿಕೆಯಾಗುವದೇ? ರಮಾ! ಮಾಧವನಿಗೊಂದು ಬಾಯಾರಿಕೆ ತಾ! ಯಾರೂ ವಿಚಾರಿಸಲಿಲ್ಲವೇ?" ಎನ್ನುತ್ತಾ ನರಹರಿರಾಯನು ಮಾಧವನ ಪಕ್ಕದ ಕುರ್ಚಿಯಲ್ಲಿ ಕುಳಿತು ಕುಶಲಪ್ರಶ್ನೆಗಳಿಗಾರಂಭಿಸಿದನು. ರಮೆಯು ಹಾಲಿನ ಪಾತ್ರೆಯನ್ನು ತಂದು ಮಾಧವನಿಗೆ ನೀಡುವಾಗ, ಪರಸ್ಪರ ಮುಖಾವಲೋಕನದಿಂದ ಅವರಿಬ್ಬರೂ ಆನಂದಪರವಶರಾದರು. ಮಾಧವನು ಅವಳ ಕೋಮಲ ಹಸ್ತದಿಂದ ಹಾಲನ್ನು ತೆಗೆದುಕೊಂಡು, ಕುಡಿದು ಪಾತ್ರೆಯನ್ನು ಹಿಂದೆ ಕೊಟ್ಟನು. ರಮೆಯ ಮುಖ, ಭಾವಗಳ ನವೀನತೆಯನ್ನು ಮಾಧವನೂ, ಮಾಧವನ ಮುಖ, ಸ್ವಭಾವಗಳ ಹೊಸ ರೂಪನ್ನು ರಮೆಯೂ ಏಕಕಾಲದಲ್ಲಿ ಪರೀಕ್ಷಿಸಿ ತೃಪ್ತಿಹೊಂದದಾದರು! ಪಾತ್ರೆಯನ್ನು ತೆಗೆದುಕೊಳ್ಳುವಾಗ ರಮೆಯು ತನ್ನ ಕಣ್ಣುಗಳನ್ನೊಂದಾವರ್ತಿ ಅವನ ಮುಖಮಂಡಲದ ಮೇಲೆ ಪಸರಿಸಿ ಮಂದಹೆಜ್ಜೆಯಿಂದ ಹೋಗಿಬಿಟ್ಟಳು. ವಿದ್ಯಾಭ್ಯಾಸ, ಪರಊರ ಸಮಾಚಾರಗಳ ಕುರಿತು, ಮಾಧವ ನರಹರಿರಾಯರೊಳಗೆ ಮಾತುಕಥೆಯಾದ ಮೇಲೆ, ಮಾಧವನು ಮನೆಗೆ ಹೋಗಲು ಎದ್ದನು.

ಸಲಿಗೆಯುವನಾದರೂ, ಅಪರೂಪವವನಾಗಿದ್ದುದರಿಂದ, ಆ ದಿನ ಕುಳಿತು ಕೊಳ್ಳಲು ನರಹರಿರಾಯನ ಮನಃಪೂರ್ವಕವಾದ ಒತ್ತಾಯವಿದ್ದಿತು! ಮಾಧವನು ಕೆಲವು ಕಾರಣಗಳನ್ನು ಹೇಳಿ, ಹೋಗದೆ ಉಪಾಯವಿಲ್ಲ ವೆಂಬುದನ್ನು ರುಜುಪಡಿಸಿ ಹೊರಟನು. ಮೆಟ್ಟಲು ಇಳಿಯುತ್ತಿರುವಾಗ, ಒಳಗಿನ ಕೊಠಡಿಯ ಮಂಚವು ಭಾರವಿಳಿಸಿಕೊಂಡು ಮ್ಲೈಮುರಿದ ಶಬ್ದವು ಬಡಿದು ಅವನ ಹೃದಯುವು ಮೃದುವಾಗಿ ಪ್ರತಿಧ್ವನಿಸಿತು. ಮಾಧವನು ಮುಖತಿರುಗಿಸಿದಾಗ, ತನ್ನನ್ನು ಪ್ರೇಮಪೂರ್ಣ ದೃಷ್ಟಿಯಿಂದ ನೋಡುತ್ತಿದ್ದ ರಮೆಯ ಮನೋಹರಮೂರ್ತಿಯು ಗೋಚರಿಸಿ ಅವನು ಹೃದಯ ಬಡಿತದೊಡನೆ ನಿಧಾನವಾಗಿ ಅಲ್ಲಿಂದ ನಡೆದುಬಿಟ್ಟನು.

೪

"ಏನು? ರಮೆಯನ್ನು ತರುವುದೋ? ತರುವುದಾದರೂ ಇಷ್ಟೆಲ್ಲಾ ಮಾಡಿದ್ದಕ್ಕೆ ಅವನ ಮಗಳನ್ನೇ ತರಬೇಕು! ನೋಡುವ! ನಮ್ಮ ಮಾಧುವಿಗೆ ಬೇರೆ ಹೆಣ್ಣೊ ಸಿಕ್ಕದಿದ್ದರಲ್ಲವ್ರೋ?"

ಕೇಶವರಾಯನ ಪತ್ನಿ ಸೀತಾಬಾಯಿಯು ಒಳ್ಳೇ ಜಾಣೆಯಾದ ಹೆಂಗಸು. ತನ್ನ ಪತಿಯ ಸ್ವಭಾವವನ್ನರಿತಿದ್ದ ಆಕೆಯು, ಸ್ವಾಭಾವಿಕ ಸೌಜನ್ಯದಿಂದ ಅವನ ಮನಮೆಚ್ಚಿಸಿ ನಡೆಯುತ್ತಿದ್ದಳು. ಕೇಶವರಾಯನು ಅವಿವೇಕಿಯಲ್ಲ. ನಿಷ್ಕಾಪಟ್ಯ, ಸರಳತನ, ಸದ್ವರ್ತನೆ ಮೊದಲಾದ ಉತ್ತಮ ಗುಣಗಳಿಂದ ಅವನು ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದನು. ಆದರೆ, ಕ್ರೋಧಗೊಂಡ ಹೃದಯವು ತಪ್ಪುದಾರಿಯನ್ನು ಸೂಚಿಸುವಾಗ ಅಂಧತೆಯಿಂದ ಅದನ್ನು ಅನುಕರಿಸುವ ಮಾನವನ ದುರ್ಬಲತೆಯು ಅವನನ್ನೂ ಬಿಟ್ಟಿರಲಿಲ್ಲ! ಇಂಥಾ ಸಮಯದಲ್ಲಿ ಸೀತೆಯು ತನ್ನ ಪರಿಶುದ್ಧ ಪ್ರೇಮದಿಂದ ಅದನ್ನು ತಿದ್ದಲು ಪ್ರಯತ್ನಿಸುತ್ತಿದ್ದಳು. ಅವಳಿಗೆ ರಮೆಯಲ್ಲಿ ಪುತ್ರಿವಾತ್ಸಲ್ಯವಿದ್ದಿತು. ತನ್ನ ಮಗನಿಗೆ ರಮೆಯನ್ನು ಮದುವೆಮಾಡಿಸಿ ದರೆ, ಮುಂದಿನ ಜೀವಮಾನವು ಸುಖಪ್ರದವಾಗಬಹುದೆಂದು ಅವಳ

ಭಾವನೆ. ಪ್ರಕೃತ ಕೇಶವರಾಯ, ನರಹರಿರಾಯರೊಳಗೆ ವೈಷಮ್ಯವಿರುವಾಗ ಈ ಮದುವೆಯ ಪ್ರಸ್ತಾಪವನ್ನೆತ್ತುವುದಾದರೂ ಹೇಗೆ? ಆದರೆ, ಇಂಥಾ ವೈರದೆಡೆಯಲ್ಲಿಯೂ ಅವರೊಳಗಿನ ಕೌಟುಂಬಿಕ ಹೊಕ್ಕು ಬಳಕೆಗಳಿಗೆ ತಡೆಯಿರುತ್ತಿದ್ದಿಲ್ಲ. ಮಾತ್ರವಲ್ಲ, ರಮೆಯ ತಂದೆತಾಯಿಗಳಿಗೆ, ಅವಳನ್ನು ಮಾಧವನಿಗೆ ಕೊಡಬೇಕೆಂಬ ಉತ್ಕಟೇಚ್ಛೆಯಿದ್ದಿತು. ರಮಾ ಮಾಧವರ ಪ್ರೇಮಸಂಬಂಧವು ಅದನ್ನು ಇನ್ನಷ್ಟು ಪ್ರಬಲಗೊಳಿಸಿದ್ದಿತು! ಆದರೆ, ಪ್ರಥಮತಃ ಬೇಕಾದುದು ಕೇಶವರಾಯನ ಸಮ್ಮತಿಯಲ್ಲವೆ? ಆತನು, ವೈರದಪೆಸೆಯಿಂದ ಈ ಕಡೆಗೆ ಗಮನಕೊಡದೆ ತನ್ನ ಮಗನಿಗೆ ಬೇರೆಕಡೆಯ ಹುಡುಗಿ ಮಾತನಾಡಿಸುತ್ತಿದ್ದನು. ತನ್ನ ಸರ್ವ ತ್ಯಾಗದಿಂದ ಲಾದರೂ ರಮೆಗೆ ಸುಖವುಣ್ಣಿಸಬೇಕೆಂದು ನರಹರಿರಾಯನ ಇಚ್ಛೆ ಮಾಧವನಿಗೆ ಅವಳನ್ನು ಕೊಟ್ಟುಬಿಡುತ್ತಿದ್ದರೆ, ಅವನ ಇಚ್ಛಾಪೂರ್ತಿಯಾಗುತ್ತಿದ್ದಿತು. ಹಾಗಾಗಬೇಕಾದರೆ ಆತನು ತನ್ನ ವೈರಿಗೆ ಶರಣು ಹೋಗಬೇಕು. ಅದು ಹೇಗಾಗುವದು? ಈ ಎಲ್ಲಾ ಕಾರಣಗಳಿಂದ ನರಹರಿರಾಯನು ನಿರುಪಾಯನಾಗಿದ್ದನು. ಕೊನೆಗೆ, ಸೀತೆಯು ತಮಗೆ ಅನುಕೂಲಳಿರುವುದರಿಂದ ಅವಳ ಮೂಲಕ ಮಾತನಾಡಿಸುವ ಸಾಹಸಕ್ಕೆ ಕೈಯಿಕ್ಕಿದನು. ಕೇಶವರಾಯನು ಊಟಮುಗಿಸಿ ಒಬ್ಬನೇ ಕುಳಿತು ವೀಳ್ಯ ಜಗಿಯುತ್ತಿರುವ ಅನುಕೂಲ ಸಮಯದಲ್ಲಿ, ರಮೆಯ ತಂದೆತಾಯಿಗಳಿಂದ ಪ್ರೇರಿತಳಾದ ಸೀತೆಯು ತನ್ನ ಅಂತರ್ಯವನ್ನು ಬಿಚ್ಚಿದಳು. ಕೂಡಲೇ ರಾಯನು ಸಿಡುಕಿನಿಂದ ಮೇಲಿನ ಉತ್ತರವಿತ್ತನು.

ಸೀತೆಯು ಸ್ವಲ್ಪ ನಿಧಾನಿಸಿ "ಬಹು ಒಳ್ಳೆಯ ಹುಡುಗಿ, ರಮೆಯಂತಹ ಹುಡುಗಿಯರು ಇನ್ನೆಲ್ಲಿಯೂ ಮಾಧವನಿಗೆ ಸಿಕ್ಕಲಾರರು!" ಎಂದು ರಾಯನನ್ನು ಸಮಜಾಯಿಸಲಿಕ್ಕೆಂಬಂತೆ ಅಲ್ಲೇ ಕುಳಿತಳು.

"ಹೌದು! ಅವಳು ದೇವಲೋಕದಿಂದ ಇಳಿದವಳು! ನಿಮಗೆ ಹೆಂಗುಸರಿಗೆ ಬೇರೇನೂ ಕಸುಬಿಲ್ಲ. ಯಾರಾದರೂ ವೈಯ್ಯಾರ ಮಾತಾಡಿ ನೀನೇ ಇಂದ್ರ! ನೀನೇ ಚಂದ್ರನೆಂದರಾಯಿತು. ಅವರೇ ಪರದೈವ!"

"ಯಾರೂ ಹೇಳದಿದ್ದರೆ ನಮಗೆ ಗೊತ್ತಾಗುವದಿಲ್ಲವೆ? ಚಿಕ್ಕಂದಿನಿಂದಲೂ ಒಟ್ಟಿಗೆ ಬೆಳೆದವರು! ಮಾಧವನ ಮೇಲೆ ಅವಳಿಗೆಷ್ಟು ಪ್ರೀತಿ ಇದೆಯೆಂದು ತಿಳಿದಿದೆಯೇ? ಮಾಧು, ಬಾಯಿಬಿಟ್ಟು ಹೇಳದಿದ್ದರೂ, ಅವನಿಗೂ ಅವಳಲ್ಲಿ ಬಹು ಪ್ರೇಮ.

"ಸಾಕು, ಸಾಕಿನ್ನು! ಆ ನರಹರಿರಾಯನು ನನಗೆ ಏನೆಲ್ಲಾ ಮಾಡಿದ್ದಾನೆಂದು ನಿನಗೆ ಗೊತ್ತಿದೆಯೇ? ನೀವು ಹೆಂಗುಸರು, ಅವಳು ಹೀಗೆ, ಇವಳು ಹಾಗೆ ಎಂದು ಹೇಳುವುದಕ್ಕಾದೀರಿ! ಅವನ ಮಗಳನ್ನು ಕಂಡು ಮದುವೆ ಮಾಡಿಸುವಷ್ಟು ಆಪತ್ತು ನನಗೀಗ ಬರಲಿಲ್ಲ!"

ನರಹರಿರಾಯರಿಂದ ನಮಗೇನಾಗಬೇಕು? ನಮಗೆ ಬೇಕಾದುದು ಹುಡುಗಿಯ ಗುಣ ನಡತೆ, ರಮೆಯನ್ನು ತರುವುದಾದರೆ ಅವರು ಸಹ ನಮ್ಮ ಯಾವ ಶರ್ತಕ್ಕೆ ಬೇಕಾದರೂ ಒಪ್ಪುತ್ತಾರಲ್ಲ!"

"ಎಲ್ಲಾ ಗೊತ್ತುಂಟು! ಒಪ್ಪದೆ ಏನು? ತನಗೆ ಫಾಯಿದೆಯಾಗುವದೆಂದರೆ ಎಲ್ಲರೂ ಒಪ್ಪುತ್ತಾರೆ! ಅವನು ಒಪ್ಪಲಿಕ್ಕೆ ನಾನು ಕೇಳಬೇಕಲ್ಲ!"

"ಏಕೆ ಕೇಳಬಾರದು? ಅವರು.........ಎಂದು ಸೀತೆಯು ಮಾತು ಮುಂದರಿಸುವಷ್ಟರಲ್ಲಿ,ಕೇಶವರಾಯನು ಮಧ್ಯದಲ್ಲೇಬಾಯಿಹಾಕಿ" ಸಾಕು ನಿನ್ನ ಲೆಕ್ಚರು! ಲೆಕ್ಚರಿಗೇನೂ ಕಡಿಮೆಯಿಲ್ಲ!" ಎಂದು ಅಲ್ಲಿಂದೆದ್ದು ಅಂಗಿ ಹಾಕಿಕೊಂಡು ಬೇರೆ ಕೆಲಸಕ್ಕೆ ಹೊರಟುಹೋದನು. ನರಹರಿರಾಯನೂ ಅವನ ಪತ್ನಿಯೂ ಹೇಳಿದುದನ್ನು ತಿಳಿಸಿ ತನ್ನ ಗಂಡನನ್ನು ಮನವೊಲಿಸಬೇಕೆಂಬ ಇಚ್ಛೆಯು ಸೀತಾಬಾಯಿಗಿದ್ದಿತು! ಆದರೆ ಸಮಯವು ಒಳ್ಳೇದಲ್ಲವೆಂಬುದನ್ನು ತಿಳಿದು, ರಾಯನು ಹೋಗುವವರೆಗೆ ಅಲ್ಲೇ ನಿಂತಿದ್ದು ಒಳಗೆ ಹೊರಟುಹೋದಳು.

೫

ಮಾಧವನು ಇಂದು ರಮೆಯ ದುಃಖಪೂರ್ಣ ಮುಖವನ್ನು ನೋಡಿದ್ದನು. ತನ್ನ ತಾಯಿಯು, ಅವಳನ್ನು ಬದಿಯಲ್ಲಿ ನಿಲ್ಲಿಸಿಕೊಂಡು

ತಲೆಬಡವುತ್ತಿರುವಾಗ ರಮೆಯು ಆವುದೋ ಒಂದು ತೀವ್ರ ವೇದನೆಯಿಂದಿದ್ದಳೆಂಬುದನ್ನು ಕಂಡಾಗಲೇ ಮಾಧವನು ಊಹಿಸಿದ್ದನು. ತನ್ನನ್ನು ನೋಡಿದ ಮೇಲಂತೂ ಕಣ್ಣುಗಳೆರಡೂ ತುಂಬಿಬಂದು, ಸೀತೆಯ ಪ್ರಶ್ನೆಗಳಿಗೆ ಅವಳು ನಡುಗು ಧ್ವನಿಯಿಂದ ಉತ್ತರಕೊಟ್ಟಾಗ, ತಾಯಿಯು ಬಗ್ಗಿ ಅವಳ ಕಣ್ಣೀರನ್ನೊರಸಿದರೂ ಕಾರಣಗಳನ್ನು ಕೇಳದಿದ್ದುದನ್ನು ಅವನು ನೋಡಿದ್ದನು. ರಮೆಯನ್ನು ಅಣಕಿಸುವ ಅಭ್ಯಾಸವು ಚಿಕ್ಕಂದಿನಲ್ಲಿ ಅವನಿಗಿದ್ದಿತು ಇದರಲ್ಲಿ ತರಬೇತಿ ಹೊಂದಿದ ಮಾಧವನ ಮುಖವು, ಪ್ರೌಢ ವಯಸ್ಸಿನಲ್ಲೂ ಅದನ್ನು ಮರೆಯಲಿಲ್ಲವೆನ್ನಬಹುದು. ಮಾಧವನ ಕಣ್ಣುಗಳಲ್ಲಿಯೂ ನೀರೊಸರಿದಂತಾಗಿ, ಅಲ್ಲಿ ನಿಲ್ಲಲಾರದೆ ಸೀದಾ ತನ್ನ ಕೊಠಡಿಗೆ ಹೊರಟುಹೋದನು. ಅವನ ಹೃದಯಪತ್ರದಲ್ಲಿ ಬಹು ಕಾಲದಿಂದ ಮೂಡಿ ಮಿನುಗುತ್ತಿದ್ದ ಬಣ್ಣಗಳಿಗೆಲ್ಲಾ ಇಂದು ಮಸಿ ಚೆಲ್ಲಿದಂತಾಗಿದ್ದಿತು. ಆತನು ಕೊಠಡಿಯ ಒಂದು ಆರಾಮುಕುರ್ಚಿಗೊರಗಿಕೊಂಡು ತುಸು ಹೊತ್ತು ವೇದನೆಯನ್ನನುಭವಿಸಿದನು. ಕೆಲ ಹೊತ್ತಿನ ಮೇಲೆ, ಇದಿರಿನ ಮೇಜಿನ ಮೇಲಿದ್ದ ಕಾಗದವೊಂದನ್ನು ತೆಗೆದು ಆತುರದಿಂದ ಓದಹತ್ತಿದನು.

................ರಿಗೆ.

ತಮ್ಮನ್ನು ಮಾಧು ಎಂದು ಕರೆಯುತ್ತಿದ್ದಾಗ ನಾನು ಪಡೆಯುತ್ತಿದ್ದ ಆನಂದದ ಛಾಯೆಯನ್ನು ಸಹ ಮರೆಯಬೇಕಾದೀತೆಂದು ಪ್ರಕೃತದ ವಿದ್ಯಮಾನಗಳು ನನ್ನನ್ನು ಎಚ್ಚರಿಸುತ್ತಿವೆ! ಆದರೆ ನಾನೆಂತು ಮರೆಯಲಿ! ಯಾವುದಕ್ಕಾಗಿ ಮರೆಯಲಿ? ಅದನ್ನು ಮರೆತುಬಿಟ್ಟು ಮತ್ತಾವುದಕ್ಕಾಗಿ ನಾನೀ ಹೃದಯವನ್ನು ತೆರವುಮಾಡಿಡಲಿ! ಪ್ರೀತಿಯಿಂದ ನಾನಾಗಿ ಮುದುಡಿಸಿದ ಆ ಎರಡಕ್ಷರಗಳ ಸಂಕುಚಿತ ನಾಮವು ಅದೆಷ್ಟು ಆಹ್ಲಾದದಾಯಕವಾಗಿದ್ದಿತು! ನಾನು ಈ ನಾಮವನ್ನು ಪ್ರೇಮದಿಂದ ಸವಿಯುತ್ತಾ ಬಂದಂತೆ, ಅದು ಈ ನಾಲಿಗೆಯಿಂದ ಸಂಪೂರ್ಣ ಅದೃಶ್ಯವಾಗುವ

ಸುದಿನವೊಂದಿದೆಯೆಂದು ಭಾವಿಸಿದ್ದೆನು! "ಅದಾಗದು! 'ಮಾಧವ ರಾಯರು' ಎಂದು ದೀರ್ಘವಾಗಿ ಸಂಬೋಧಿಸುವದೇ ನಿನ್ನ ಮುಂದಿನ ಭಾಗ್ಯ!" ಎಂದು ನನ್ನ ದುರ್ದೈವವು ಸಾರುತ್ತಿದೆ. ನಾನಿದಕ್ಕೊಪ್ಪಲಾರೆನು! ಪ್ರಕೃತ ತಮ್ಮ ಸಂಬೋಧನೆಯ ಗೆರೆ ಯೊಂದು ಖಾಲಿಯಾಗಿಯೇ ಉಳಿಯಲಿ! ನನ್ನ ಹಕ್ಕನ್ನು ಅಪಹರಿಸಲೆತ್ನಿಸುವ ಒಂದೆರಡು ವಿದ್ಯಮಾನಗಳ ಅಧಿಕಾರ ವನ್ನು ನಾನೊಪ್ಪುವುದಿಲ್ಲ ನನ್ನ ಕಣ್ಣಮುಂದೆ ಈಗ ಎರಡು ಪಥಗಳಿವೆ. ಒಂದು ಕಲ್ಪವೃಕ್ಷದ ನೆರಳಿನಿಂದಾವರಿತವಾಗಿದ್ದು, ಅಮೃತಹನಿಗಳಿಂದ ತೋಯಿಸುವಂತಹುದು. ಇನ್ನೊಂದು ಒಡನೆಯೇ ನನ್ನನ್ನು ಅಗಾಧ ಕಂದರಕ್ಕುರುಳಿಸುವಂಥಾದ್ದಿದೆ! ಅಂತೂ, ನಾನೀಗ ತಮ್ಮಿಂದ ಪಡೆಯುತ್ತಿದ್ದ ಗೂಢಾನಂದದ ಗಡಿಯಿಂದ ಹೊರಗೆ ಕಾಲಿಡುವವಳು. ಈ ಸುಮುಹೂರ್ತದಲ್ಲಿ (ಇದನ್ನು ಸುಮುಹೂರ್ತವೆಂದೇ ಕರೆಯುವೆನು!) ಈ ಅಭಾಗಿನಿ ಗೊಮ್ಮೆ ದರ್ಶನವನ್ನೀಯುವಿರಾ?

ತಮ್ಮ "ರಮಾ"

ಕಾಗದವನ್ನು ಓದಿ ಮುಗಿಸುವಾಗ ಮಾಧವನ ಕಪೋಲಗಳಲ್ಲಿ ಕಣ್ಣೀರ ಧಾರೆಗಳೆರಡು ನಿಧಾನವಾಗಿ ಉರುಳಿಹೋಗುತ್ತಿದ್ದವು! ತುಸು ಹೊತ್ತಿನಲ್ಲಿ ದಿಗ್ವಿಜಯವನ್ನು ಪಡೆದ ಭಟನಂತೆ ಆತನು ಉಲ್ಲಾಸ ಭರಿತನಾದನು.

೬

ರಮಾ! ಪಂಥದಲ್ಲಿ ಗೆದ್ದವರಾರೆಂದು ಈಗ ಹೇಳಬಹುದೇ? ಮಾಧವನು ಪ್ರೇಮಪೂರ್ಣ ದೃಷ್ಟಿಯಿಂದ ರಮೆಯನ್ನು ನೋಡುತ್ತಾ ಹೇಳಿದನು!

"ಯಾರು? ಮೊದಲು ಮಾತನಾಡಿದವರಾರು? ನಾನು ನನ್ನ ಶಪಥಕ್ಕೆ ತಪ್ಪಿ ನಡೆದುದಿಲ್ಲ." ಅವಳ ಗಲ್ಲದ ಕಂಬನಿಯು ಪೂರಾ ಆರಿರಲಿಲ್ಲವಾದರೂ ಅದು ನಗೆಯ ಶೋಭೆಯನ್ನು ಕೆಡಿಸಲಿಲ್ಲ ಎಂದು ರಮೆಯು ಮುಗುಳು ನಗೆಯಿಂದ ಮಾಧವನ ಕುರ್ಚಿಯ ಬೆನ್ನನ್ನಾದರಿಸಿ ನಿಂತಳು ಅವನು ಪ್ರೇಮಮಿಶ್ರಿತ ಪರಿಹಾಸ್ಯದೊಡನೆ "ಗೆದ್ದವಳು ನೀನೇಯೇನ. ರಮಾ!? ಹಾಗಾದರೆ ನನ್ನ ಮೇಜಿನ ಮೇಲೆ ಕಾಗದವನ್ನು ಬರೆದಿಟ್ಟವಳು ಯಾವ ರಮಾ!" ಎಂದನು.

"ಆ ಕಾಗದದ, ಮೇಲಿನ ಖಾಲಿ ಪಂಗ್ತಿಯಲ್ಲಿ ನಾನಾವ ಅಕ್ಷರಗಳನ್ನು ಸೇರಿಸಲೆಂದು ಹೇಳುವಿರಾ?" ಎನ್ನುವಾಗ ರಮೆಯು ಕಂದಿದಾನನದಿಂದ ಮಾಧವನನ್ನು ನೋಡುತ್ತಿದ್ದಳು.

"ಮೊದಲು ಸೋತವರಾರೆಂಬ ನಿಷ್ಕರ್ಷೆಯಾಗಬೇಕಲ್ಲವೆ? ನಾನು ನಿನಗೆ ಕಲಿಸಿಕೊಡುವುದನ್ನು ಅಂದೇ ಬಿಟ್ಟಿರುವೆನಲ್ಲ!"

"ನಾನೇ ಸೋತವಳು! ಸೋತು ಶರಣಾದವಳು! ಶರಣಾಗತಳಿಗೆ ಪ್ರಾಣದಾನಮಾಡಲು ಮರೆಯುವಿರೇ?" ಎನ್ನುವಾಗ ರಮೆಯ ಕಂಠವು ಬಿಗಿದುಬಂದು ಮುಂದೆ ಮಾತು ಹೊರಡದಂತಾಯಿತು. ಮಾಧವನು ತುಸುಹೊತ್ತು ತಟಸ್ಥನಾದನು. ರಮೆಯ ಪ್ರಶ್ನೆಗೆ ಉತ್ತರವನ್ನು ಕೊಡಲು ಸಮಯ ಬೇಕಿರಲಿಲ್ಲ! ಅದನ್ನವನು ಮೊದಲೇ ತಯಾರಿಸಿ ತಂದಿದ್ದನು. ಆದರೆ, ರಮೆಯ ಬಾಡಿದಾನನವನ್ನು ಪ್ರತಿಬಿಂಬಿಸಲು, ಮೃದುವಾಗಿ ಅಲ್ಲೋಲಕಲ್ಲೋಲವಾಗುತ್ತಿದ್ದ ಆತನ ಹೃದಯ ಸರಸಿಯು ತುಸು ಶಾಂತವಾಗಬೇಕಾಯಿತು. ಮಾಧವನು ರಮೆಯ ಕೋಮಲ ಹಸ್ತಗಳೆರಡನ್ನೂ ಹಿಡಿದುಕೊಂಡು 'ರಮಾ!' ನೀನು ನನ್ನನ್ನು 'ಮಾಧು' ಎಂದೇ ಕರೆ! ನಾವು ಅಂದಿನ ರಮಾ ಮಾಧುಗಳಾಗಿಯೇ ಇರೋಣ!" ಎಂದನು.

"ನಾವು ಅಂದಿನ ರಮಾ ಮಾಧುಗಳ ಪ್ರಬುದ್ಧ ಪ್ರತಿಮೂರ್ತಿಗಳಾಗಿರಲು ಪ್ರಕೃತ ತಡೆಯಿದೆಯೆಂಬುದನ್ನು ಮರೆತಿರುವಿರಾ? ನಿಮ್ಮ ತಂದೆಯವರ ಮಾತನ್ನು ಮೀರಲು ಎಡೆಗೊಳ್ಳುವಿರೇ?"

ಮಾಧವನು ತುಸು ದಿಟ್ಟತನದ ಮುಗುಳು ನಗೆಯಿಂದ "ಅದೆಲ್ಲಾ ನಿನಗೇಕೆ? ನನ್ನನ್ನು ಬೇಕಾದಂತೆ ಕರೆಯುವ ಸ್ವಾರ್ಥವನ್ನು ಮೊದಲು ಸಾಧಿಸಿಕೋ! ನನ್ನ ಕರ್ತವ್ಯವನ್ನು ನನ್ನ ಪಾಲಿಗೆ ಬಿಡುವುದಕ್ಕೂ ನಿನಗಿಷ್ಟವಿಲ್ಲವೇನು?" ಎಂದನು.

"ಅಂದಿನ ಧಾರ್ಷ್ಟ್ಯವೊಂದು ಯಾವ ಅನುಭವಕ್ಕೂ ಆಹುತಿ ಯಾದಂತೆ ತೋರುವುದಿಲ್ಲ!" ಎನ್ನುತ್ತಾ ರಮೆಯು ಮುಗುಳು ನಗೆಯಿಂದ ಮಾಧವನನ್ನು ನೋಡಿದಳು!

"ಹೌದು ರಮಾ! ಒಂದಕ್ಕೂ ಎರಡಕ್ಕೂ ಅಳುವ ಅಭ್ಯಾಸವು ನಿನಗೂ ಹೋಗಲಿಲ್ಲ! ನೀನು ಅಂದಿನ ರಮೆಯೇ ಆಗಿರುವಾಗ ನಾನೂ ಆದೇ ಮಾಧವನಾಗಿರಬಾರದೇಕೆ?"

ರಮೆಯ ಮುಖಕಮಲವು ಅರಳಿತು. ಅವಳು ಪ್ರೇಮದಿಂದ ಕುರ್ಚಿಯ ಹಿಂಬದಿಯಲ್ಲಿ ಮಾಧವನ ಮುಖದೆಡೆಗೆ ಬಗ್ಗಿ "ಆ ಎರಡಕ್ಷರ ಗಳ ಬದಲಿಗೆ ಇನ್ನೆರಡಕ್ಷರಗಳನ್ನು ಉಪಯೋಗಿಸಲು ನನಗೆ ಅನುಮತಿ ಕೊಡುವಿರಾ? ಎಂದಳು.

ಮಾಧವನು ಅವಳ ಎರಡು ಕೈಗಳನ್ನೂ ಎದೆಗಪ್ಪಿಕೊಂಡು "ರಮಾ! ನಾನು ನಿನ್ನವನೆಂದೇ ತಿಳಿ! ನನ್ನಿಂದ ಬೇಕಾದುದನ್ನು ಅನುಮತಿಗೆ ಕಾಯದೆ ನೀನಾಗಿ ಪಡೆಯಬಹುದು. ನಿನ್ನ ಆ ಎರಡಕ್ಷರಗಳ ಸವಿಯನ್ನು ನಾನೂ ನೋಡಲೇ?"

ಪ್ರಿ....ಯಾ!....

ರಮೆಯ ಕಂಠವು ಉಬ್ಬಿಹೋಗಿ ಮುಖವನ್ನು ಮಾಧವನ ಎದೆ ಗೊತ್ತಿದಳು. ಇಬ್ಬರ ಹೃದಯಗಳೂ ವೇಗವಾಗಿ ಬಡಿಯಲಾರಂಭಿಸಿದವು!

## 2

ಈ ದಿನ ನರಹರಿರಾಯನ ಮನೆಯಲ್ಲಿ ಗದ್ದಲವೇ ಗದ್ದಲ! ನೆಂಟ ರಿಷ್ಟರು, ಊರ ಪರಊರ ಜನರು, ಚಾವಡಿ, ಚಪ್ಪರ, ಕೋಣೆ, ಮನೆ

ಯೊಳಗೆಲ್ಲಾ ತುಂಬಿದ್ದಾರೆ. ಎಲ್ಲೆಲ್ಲಿಯೂ ಆನಂದ, ಎಲ್ಲೆಲ್ಲಿಯೂ ಕೋಲಾಹಲ! ಒಂದು ಕಡೆ ಬೇಂಡು ವಾಲಗಗಳ ಅಬ್ಬರ, ಇನ್ನೊಂದೆಡೆಯಲ್ಲಿ ಹುಡುಗರ ಆರ್ಭಟ! ಮತ್ತೊಂದೆಡೆಯಲ್ಲಿ ಸಭಿಕರ ಪಂಚಾಯತಿಕೆ! ಬೇರೊಂದೆಡೆಯಲ್ಲಿ ಹೆಂಗುಸರ ಪಿಸಿಪಿಸಿ! ಅಂತೂ ಎಲ್ಲೆಡೆಯಲ್ಲೂ ಎಂದೂ ಇಲ್ಲದ ಗೌಜಿ! ಉತ್ಸಾಹ! ಬರುವವರು, ಹೋಗುವವರು, ಸಭೆ ಸುಧಾರಿಸುವವರು, ಉಂಡು ತಿಂದು ತೇಗುವವರು, ಹೆಣ್ಣಿನ ಕಡೆಯವರು, ಗಂಡಿನ ಕಡೆಯವರೆಂದು ಜನಸಮೂಹಕ್ಕಂತೂ ಲೆಕ್ಕವೇ ಇಲ್ಲ! ಹೆಂಗಸರ ಸೀರೆ ಕುಪ್ಪಸ ಆಭರಣಗಳ ಶೃಂಗಾರ, ಗಂಡಸರ ಘೋತ್ರ, ಜರಿ ಮುಂಡಾಸುಗಳ ಬೆಡಗು, ಮದುವೆ ಚಪ್ಪರದ ನಾನಾವಿಧಾಲಂಕಾರಗಳಿಂದ ಇಡೀ ಮನೆಯೇ ಥಗಥಗಿಸುವಂತಿದ್ದಿತು. ಇಷ್ಟೆಲ್ಲಾ ಸಂಭ್ರಮಗಳೇನೆಂದು ಬೇರೆ ಹೇಳಬೇಕೇ?

ನಮ್ಮ ಮಾಧವನಿಗೂ ರಮೆಗೂ ಇಂದೇ ವಿವಾಹಮಹೋತ್ಸವ! ಅದು ಹೇಗಾಗುವುದು? ಕೇಶವರಾಯನು ಒಪ್ಪಬೇಕಲ್ಲ?" ಎಂದು ವಾಚಕರು ಪ್ರಶ್ನಿಸಬಹುದು. ಕೇಶವರಾಯನೇನು ಅವಿವೇಕಿಯಲ್ಲ! ರಮೆಯ ಮೇಲೆ ಅವನಿಗಿದ್ದ ಪುತ್ರಿವಾತ್ಸಲವನ್ನು ನೀವು ಬಲ್ಲಿರಿ. ಮಾಧವನಂತೂ ರಮೆಯು ಹೊರತು ಇನ್ನಾರನ್ನೂ ವಿವಾಹವಾಗಲಾರೆನೆಂದು, ಭಯ, ದಾಕ್ಷಿಣ್ಯಗಳನ್ನು ಬಿಟ್ಟು ಅವನೊಡನೆ ಕಂಠೋಕ್ತವಾಗಿ ಹೇಳಿದ್ದಳು. ಅವನಿಗಿದ್ದುದು ನರಹರಿರಾಯನೊಬ್ಬನ ಮೇಲೆ ಮಾತ್ರ ವೈರ. ಈ ವೈರವನ್ನು ಕಟ್ಟಿಕೊಂಡು ಮಗನ ಹಕ್ಕನ್ನು ಅಲ್ಲಗಳೆಯುವ ಅಧಿಕಾರವು ತನಗಿಲ್ಲವೆಂಬುದನ್ನು ವಿವೇಕಿಯಾದ ಅವನು ಅರಿತಿದ್ದನು. ಇತ್ತ ರಮೆಯು ತಾನು ಮಾಧವನನ್ನು ವರಿಸದಿದ್ದರೆ ಪ್ರಾಣದಿಂದಿರಲಾರೆನೆಂದು ನರಹರಿರಾಯನೊಡನೆ ಖಂಡಿತವಾಗಿ ಹೇಳಿದ್ದಳು. ಆದುದರಿಂದ ತನ್ನ ಸರ್ವಸ್ವವನ್ನರ್ಪಿಸಿಯಾದರೂ ರಮೆಯ ಸುಖಕ್ಕೆ ಭಂಗಬಾರದಂತೆ ನೋಡಬೇಕೆಂದು ಆತನು ಸಂಕಲ್ಪಿಸಿದ್ದನು. ಇದಕ್ಕಾಗಿ ಅಭಿಮಾನವನ್ನು ಒತ್ತಟ್ಟಿಗಿಟ್ಟು ಕೇಶವರಾಯನನ್ನು ತೃಪ್ತಿಪಡಿಸಲು ಅವನು ಸಿದ್ಧನಾದನು.

ಸರಿ ಇನ್ನೇನು? ಇತ್ತಂಡದವರೂ ತಮ್ಮ ಮಕ್ಕಳ ಹಿತಚಿಂತನೆಗಾಗಿ ವೈರವನ್ನು ಬಿಟ್ಟು ಒಂದಾಗಿದ್ದರು. ಅಂತೂ ಈ ದಿನವೇ ವಿವಾಹ! ಇನ್ನು ಧಾರೆ ಮುಹೂರ್ತಕ್ಕೂ ಹೆಚ್ಚು ಸಮಯವಿಲ್ಲ. ವರನನ್ನು ಶೃಂಗರಿಸುವವರ ಕೆಲಸವು ಸುಲಭದಲ್ಲೇ ಮುಗಿದಿದೆ! ಮಾಧವನು ನವ ನಾಗರೀಕ ತರುಣನಲ್ಲವೆ? ಅವನು ಕುತ್ತಿಗೆ ತುಂಬಾ ಹಾರ, ದೊಡ್ಡ ಜರಿ ಮುಂಡಾಸುಗಳಿಗೊಪ್ಪದೆ ಆಧುನಿಕ 'ಫೇಶನ'ನ್ನೇ ಅನುಕರಿಸಿದ್ದನು. ಆದರೆ ರಮೆಯನ್ನು ಶೃಂಗರಿಸಿದಷ್ಟು ಹೆಂಗಸರಿಗೆ ಸಾಕಾಗುವುದಿಲ್ಲ. ಹೇಗೂ ಮುಗಿಸಿಯಾಯಿತು! ಇನ್ನು ತಡವಿಲ್ಲವಯ್ಯ! ಅಲ್ಲಿ ನೋಡಿ! ಒಂದೆಡೆಯಿಂದ ವರನನ್ನೂ ಇನ್ನೊಂದೆಡೆಯಿಂದ ವಧುವನ್ನೂ ಮಂಟಪಕ್ಕೆ ಕರಕೊಂಡು ಹೋಗುತ್ತಿದ್ದಾರೆ! ಇನ್ನೇನು-ಅವರ ಮುಂದಿನ ಜೀವ ಮಾನದ ಪ್ರತಿಯೊಂದು ಕ್ಷಣವೂ, ಪ್ರೇಮಮಯ! ಆನಂದದಾಯಕ! ಅಮೃತಬಿಂದು! ಸುಖದ ಹನಿ! ಸಾಕಿನ್ನು! ಚೆಂಡು ವಾಲಗಗಳು ಮೊಳಗು ತ್ತಿವೆ! ಈ ಚಬ್ಬರದ ಮಧ್ಯೆ ಇನ್ನೂ ಹೇಳಿದರೆ ಕೇಳುವವರು ಬೇಕಲ್ಲವೆ?

|| ಸಂಪೂರ್ಣಂ ||

# “ ಗಂಗೆಯೊಳಗಿನ ನಾವೆ ”

## ಅರ್ಥಾತ್

# “ ನಿರ್ಮಲ ಪ್ರೇಮ ”

ಬರೆದವ: ನೆಜ್ಞೂರ ನೀಲಕಂಠ, ...

ಕಡೆಯ ಪ್ರವೇಶವು ಸಂಪೂರ್ಣವಾಗುತ್ತಲೇ ಪರದೆಯು ಬಿದ್ದಿತು. ‘ಶಕುಂತಲೆ’ಯ ಪಾರ್ಟು ಮಾಡಿದ ತಾರಾದೇವಿಯು ‘ರಾಜಾ ದುಷ್ಯಂತ’ನೆದುರಿಗೆ ತನಗಾದ ಅಪಮಾನದ ಅಸಹ್ಯತೆಯಿಂದುಚ್ಚಾರಿಸಿದ ಶಬ್ದಗಳನ್ನುಚ್ಚರಿಸುವಾಗಲಂತೂ ಪ್ರೇಕ್ಷಕರ ಕರಘರ್ಷಣ ಧ್ವನಿಯು ನಾಟಕ ಗೃಹದ ಮುಚ್ಚಿಗೆಯನ್ನೇ ಕಿತ್ತುಕೊಂಡು ಹೋಗುವಂತೆ ತೋರಿತು ಪ್ರೇಕ್ಷಕರು ಲೋಕರೂಢಿಯನ್ನು ಮರೆತು ರಂಗಸ್ಥಳದ ಕಡೆಗೆ ಧಾವಿಸಿ ಗುಂಪು ಗುಂಪಾಗಿ ನಿಂತುಕೊಂಡರು. ಆಕೆಗೆ ಬಹುಮಾನವಾಗಿ ಕೊಟ್ಟ ವಸ್ತುಗಳು ರಾಶಿಯಾಗಿ ಬಿದ್ದಿದ್ದವು. “ರಂಗಸ್ಥಳದ ಮೇಲೆ ಪುಷ್ಪವೃಷ್ಟಿ ಯಾಯಿತು.” ಮೇನಕೆಯು ಶಕುಂತಲೆಯನ್ನು ತನ್ನ ಪುಷ್ಪಕ ವಿಮಾನ ದಲ್ಲಿ ಕೂಡ್ರಿಸಿಕೊಂಡು ಹೋಗದಿದ್ದರೆ ಇನ್ನೇನಾಗುತ್ತಿತ್ತೊ ದೇವರೇ ಬಲ್ಲ! ಕಂಪೆನಿಯ ಮಾಲಕನು ಸ್ಟೇಜಿನ ಮೇಲೆ ಬಂದು ಅಪೂರ್ವ ಉದಾರಾ ಶ್ರಯವಿತ್ತದ್ದಕ್ಕೆ ಪ್ರೇಕ್ಷಕರನ್ನು ಅಭಿನಂದಿಸಿ, ಮರುದಿನವೂ ಅದೇ ನಾಟ ಕವನ್ನು ಅಭಿನಯಿಸುವೆವಾಗಿ ವಾಗ್ದಾನವಿತ್ತದ್ದರಿಂದ ಪ್ರೇಕ್ಷಕರಿಗೆ ಸ್ವಲ್ಪ ಸಮಾಧಾನವೆನಿಸಿತು. ನಾಟಕಗೃಹದಿಂದ ಪ್ರೇಕ್ಷಕರೆಲ್ಲರೂ ಹೊರ ಬಿದ್ದರು. ಓರ್ವ ತರುಣನು ಮಾತ್ರ ಇನ್ನೂ ಹೋಗಿಲ್ಲ. ಆತನು ಸಶಕ್ತ, ಸುಂದರಾಂಗನಲ್ಲದೆ ಮುಖದ ಮೇಲೊಂದು ಅಪೂರ್ವ ಕಳೆ ಯಿದ್ದಿತು.

ಆ ತರುಣನು, “ತಾರಾದೇವಿಯವರನ್ನು ಒಂದು ಕ್ಷಣ ಭೆಟ್ಟಿಯಾಗ ಬಹುದೇ?” ಎಂದು ಎಲ್ಲಾ ಪ್ರೇಕ್ಷಕರು ಹೊರಗೆ ಹೋದಮೇಲೆ ಮ್ಯಾನೇ ಜರನಿಗೆ ಕೇಳಿದನು.

‘ಅದು ನಮ್ಮ ನಿಯಮದ ವಿರುದ್ಧವಾಗುತ್ತೆ’ ಎಂದು ಮೋರೆ ಗಂಟು ಹಾಕಿ ಮ್ಯಾನೇಜರ್ ಹೇಳಿದನು.

‘ಈ ಕಾರ್ಡನ್ನಾದರೂ ಅವರಿಗೆ ಕಳುಹಿಸುವಿರಾ?’

‘ದಯಮಾಡಿ ಕ್ಷಮಿಸಿರಿ. ಅದೂ ನಮ್ಮ ನಿಯಮ ವಿರುದ್ಧವಾಗುತ್ತೆ.’ ನಿರಾಶನಾದ ತರುಣನು ರಂಗಸ್ಥಳದಿಂದಿಳಿದು ನಾಟಕಗೃಹದ ಹೆಬ್ಬಾಗಿಲ ಕಡೆಗೆ ಹೋಗುತ್ತಿದ್ದನು. ಅಷ್ಟರಲ್ಲಿ “ಇಲ್ಲಿ ಬನ್ನಿ ಸಾರ್. ಒಂದು ನಿಮಿಷ ವೈಟ್ ಮಾಡಿ. ನಿಮ್ಮ ಕಾರ್ಡಿಲ್ಲಿ ಕೊಡಿ.” ಎಂದು ಮ್ಯಾನೇಜರನು ಹೇಳಿದನು.

ಜೇಬಿನಿಂದ ಅಚ್ಚುಹಾಕಿದ ಕಾರ್ಡನ್ನು ತೆಗೆದು ಕೊಟ್ಟನು.

ಮ್ಯಾನೇಜರನು ಕೈಯಲ್ಲಿಯ ಕಾರ್ಡ್ ಕಡೆಗೆ ದೃಷ್ಟಿಹೊರಳಿಸಿ “ಕುಮಾರ ನಿರ್ಮಲಕಾಂತ. ಓ. ಬಿ. ಇ” ಎಂದೋದಿದನು.

ಆತನ ಗಂಟು ಮೋರೆಯು ಜರ್ರನೆ ಇಳಿಯಿತು.

ಕುಮಾರ ನಿರ್ಮಲಕಾಂತರು ಆ ಪಟ್ಟಣದ ಪ್ರತಿಷ್ಠಿತ ಗೃಹಸ್ಥರು. ಒಳ್ಳೇ ವಿದ್ಯಾವಂತರೆಂದೂ ಸಂಗೀತಕಲಾ ನಿಪುಣರೆಂದೂ ಎಲ್ಲರೂ ಮನ್ನಿಸುತ್ತಿದ್ದರು. ಮೇಲಾಗಿ ದೊಡ್ಡ ಜಹಗೀರದಾರರು. ವಾರ್ಷಿಕ ಉತ್ಪನ್ನವು ಏಳೆಂಟು ಲಕ್ಷಕ್ಕೆ ಕಡಿಮೆ ಇರಲಿಲ್ಲ. ಇವರ ಉದಾರಾಶ್ರಯ ಹೊಂದದ ಸಂಸ್ಥೆಗಳು ಒಂದೂ ಇರಲಿಲ್ಲ. ಅವರು ಆ ಪ್ರಾಂತ್ಯದ ಮುಂದಾಳು. ಇಂಥವರು ಆ ಮ್ಯಾನೇಜರನ ಎದುರಿನಲ್ಲಿ ಸರ್ವಸಾಧಾರಣ ಗೃಹಸ್ಥರಂತೆ ನಿಂತಿದ್ದರು. ಮ್ಯಾನೇಜರನಿಗೆ ಮಾತ್ರ ತನ್ನ ಆಚರಣೆಯ ಬಗ್ಗೆ ನಾಚಿಕೆಯಾಯಿತು.

“ರಾಯರೇ, ಕ್ಷಮಿಸಿರಿ; ತಿಳಿಯದೇ ಪ್ರಮಾದವಾಯಿತು. ನಿಮ್ಮ ಕಾರ್ಡನ್ನು ತಾರಾದೇವಿಯವರ ಕಡೆಗೆ ಒಯ್ಯುತ್ತೇನೆ.” ಎಂದು ನಮ್ರತೆಯಿಂದ ನುಡಿದನು.

ಕುಮಾರನು ಅವನಿಗೆ ನಿಲ್ಲಲು ಸಂಜ್ಞೆಮಾಡಿ, “ಬೇಡ, ಈಗ ಅವರಿಗೆ ತೊಂದರೆ ಕೊಡುವದು ಬೇಡ. ಅವರು ವಿರಾಮ ತೆಗೆದು

ಕೊಳ್ಳಲಿ. ನಾನು ನಾಳೆ ಸಾಯಂಕಾಲ ಐದು ಘಂಟೆಗೆ ಬರುತ್ತೇನೆ.'' ಎಂದನು.

''ಅವರಿಗೇನೂ ಬೇಸರವಾಗಲಿಕ್ಕಿಲ್ಲ. ಅದೋ ಅಲ್ಲಿ ವಿಶ್ರಮಿಸಿರಿ. ಕ್ಷಣಾರ್ಧದಲ್ಲಿ ಬರುತ್ತೇನೆ.''

ಆದರೆ ನಿರ್ಮಲಕಾಂತನ ಮನಸ್ಸು ಬಹಳೇ ಚಂಚಲವಾಗಿತ್ತು. ಅದನ್ನು ಮುಚ್ಚಿಕೊಳ್ಳುವದಕ್ಕಾಗಿ ಈಗ ಬೇಡವೆಂದು ಹೇಳಿ ಆ ಮ್ಯಾನೇಜರನಿಗೆ ಆತನ ಸನ್ಮಾನಕ್ಕೆ ಅಭಿನಂದಿಸಿ, ಮರುದಿನ ಸಾಯಂಕಾಲ ಬರತ್ತೇನಾಗಿ ಹೇಳಿ ಹೊರಟನು. ಆದರೆ ಮನಸ್ಸೆಲ್ಲವೂ ನಾಟಕಗೃಹದ ಕಡೆಗೇ!

೨

ಅದೊಂದು ಅಚ್ಚುಕಟ್ಟಾದ ಕೋಣೆ. ವ್ಯವಸ್ಥೆಯಿಂದ ಸಾಮಾನುಗಳು ಇರಿಸಲ್ಪಟ್ಟಿದ್ದವು. ತಾರೆಯು ವಿಚಾರಮಗ್ನಳಾಗಿ ಕೂತಿದ್ದಳು. ಆ ಹಿಂದಿನ ರಾತ್ರಿಯ ದೃಶ್ಯ—ಅತ್ಯುತ್ತಮವಾಗಿ ಅಭಿನಯಿಸಲ್ಪಟ್ಟ ಕಡೆಯ ಸೀನು—ಅವಳ ಮನಶ್ಚಕ್ಷುವಿನೆದುರಿಗೆ ಚಲನ ಚಿತ್ರ ಪಟದಂತೆ ಕಾಣುತ್ತಿತ್ತು. ಪ್ರೇಕ್ಷಕರು ಆಕೆಯನ್ನು ನೋಡಲು ಎಷ್ಟು ಉತ್ಸಕರಾಗಿದ್ದರು. ಆಕೆಯ ಸಖ್ಯ ಬೆಳೆಸಲು ಹೇಗೆ ಹಾತೊರೆಯುತ್ತಿದ್ದರು. ಆದರೆ ಅವಳು ಅವರೆಲ್ಲರನ್ನೂ ತೃಣೀಕರಿಸಿದ್ದಳು. ಇಷ್ಟು ಜನ ಸಮುದಾಯದಲ್ಲಿ ಓರ್ವನು ಮಾತ್ರ ನಿಶ್ಚಲ. ಅವನ ಮುಖದ ಮೇಲೆ ವ್ಯಕ್ತವಾಗುತ್ತಿದ್ದ ಶಾಂತತೆಯನ್ನು ನೋಡಿದರೆ, ಅವನು ಮಾನವನಲ್ಲವೆಂಬೇ ಭಾಸವಾಗುತ್ತಿತ್ತು. ಅಹಹಾ! ಪ್ರೇಮಪೂರ್ಣ ಪುಷ್ಪಬಾಣಗಳು ಈತನ ಕಣ್ಣುಗಳಿಂದಲೇ ಹೊರಡುತ್ತಿದ್ದವೇ? ಅದೆಂತಹ ಆತ್ಮನಿಗ್ರಹ. ಆತನ ಶಾಂತ ತೇಜೋಮಯ ಆಲೋಚನೆಗಳಿಂದ ಹೊರಡುತ್ತಿದ್ದ ಪುಷ್ಪಬಾಣಗಳು ತಾರೆಯ ಕೋಮಲ ಹೃದಯವನ್ನು ಗ್ಲಾನಿಮಾಡುತ್ತಿದ್ದವು. ಆತನನ್ನು ಎಂದಾದರೂ ಕಾಣುವೆನೇ? ಯಾರು ಬಲ್ಲರು! ತನ್ನ ಸುದೈವದಿಂದ ಇಂದಿನ ಪ್ರಯೋಗಕ್ಕೆ ಬಂದರೆ ಆತನನ್ನು ಮಾತನಾಡಿಸದೇ ಬಿಡಲಿಕ್ಕಿಲ್ಲವೆಂದು ನಿರ್ಧರಿಸಿದಳು.

ಸಿಲುಗನ್ನಡಿಯ ಕಡೆಗೆ ತಿರುಗಿದಳು. ದಿನಮಣಿಯು ಉದಯಾಚಲದ ಶಿಖರವನ್ನೇರಿದಾಗ ಸಂಪೂರ್ಣ ಅರಳಿದ ಕಮಲಿನಿಯಂತೆ ಅವಳ ಮುಖಚಂದ್ರವು ಶೋಭಿಸಿತು. ಈಗ ತಾನೇ ಉದಯಿಸಿದ ಆ ಪುಷ್ಪವು ಮೂವತ್ತೈದು ವಸಂತ ಋತುಗಳನ್ನು ಕಳೆದಿದೆಯೆಂದು ಹೇಳಲು ಯಾರಿಗೆ ತಾನೇ ಶಕ್ಯ. ಅವಳ ಸೌಂದರ್ಯವೂ, ಒನಪೂ, ಒಯ್ಯಾರವೂ ಎಂಥ ತರುಣಿಯನ್ನಾದರೂ ನಾಚಿಸುವಂತೆ ಇತ್ತು. ತಾರೆಯ ಹೃದಯ ಗಹ್ವರವು ಪ್ರೇಮಜ್ವಾಲೆಯಿಂದ ಬೆಳಗತೊಡಗಿತು.

ಇಪ್ಪತ್ತು ವರ್ಷಗಳ ಹಿಂದೆ ಅವಳಿಗೆ ಪ್ರೇಮದ ನಿಷ್ಠುರತೆಯ ಅನುಭವವಿತ್ತು. ಅಂದಿನಿಂದ ಅವಳು ವಿಧವೆಯಾಗಿ ಕಾಲಕಳೆಯುತ್ತಿದ್ದಳು. ಅನೇಕರು ಅವಳಲ್ಲಿ ಪ್ರೇಮಯಾಚನೆ ಮಾಡಿದ್ದರು. ಆದರೆ ಅವರೆಲ್ಲರನ್ನೂ ನಿರಾಶೆಪಡಿಸಿದ್ದಳು. ಅವರ ಪ್ರೇಮದಲ್ಲಿ ಸತ್ಯತೆಯಿರಲಿಲ್ಲ. ಸೋಗೂ ವಿಶ್ವಾಸಘಾತವೂ ಮಿಲನವಾಗಿದ್ದವು. ಆದರೆ ಇಂದಿಗೆ ಮಾತ್ರ ಅವಳು ಬಹು ಕಷ್ಟದಿಂದ ಸಂಪಾದಿಸಿದ ಆತ್ಮನಿಗ್ರಹವು ನಾಶವಾಯಿತು. ಆ ಜನಸಮುದಾಯದ ಒಂದೇ ಒಂದು ವಿಗ್ರಹವು ಮಾತ್ರ ಅವಳ ಹೃದಯದಲ್ಲಿ ಸ್ಥಿರವಾಗಿತ್ತು. ಆ ವಿಗ್ರಹವನ್ನು ಮರೆಯಲು ಎಂದಿಗೂ ಸಾಧ್ಯವಿಲ್ಲ. ಆತನನ್ನು ಎಲ್ಲಿಯಾದರೂ ಬೇರೇ ಸ್ಥಳದಲ್ಲಿ ನೋಡಿದ್ದರೆ ಅವಳಿಗೆ ಅಷ್ಟು ಅನಿಸುತ್ತಿದ್ದಿಲ್ಲ. ತನ್ನೆದುರಿನಲ್ಲಿ, ನಿಶ್ಚಲವಾದ ಪ್ರೇಮವನ್ನು ಬಹುಮಾನವಾಗಿ ಕೊಟ್ಟವನನ್ನು ಮರೆಯಲು ಅಶಕ್ಯ.

ತಾರೆಯ ದಾಸಿಯು ಕೋಣೆಯನ್ನು ಪ್ರವೇಶಿಸಿ, "ನಿನ್ನೆ ನಿಮಗೆ ಬಹುಮಾನವಾಗಿ ಸಿಕ್ಕ ವಸ್ತುಗಳನ್ನು ತರಲಾ?" ಎಂದಳು.

"ಬೇಡ ತರುವುದು ಬೇಡ; ಅವುಗಳಲ್ಲೇನಿದೆ?"

"ದೊಡ್ಡ ರಾಶಿಯೇ ಬಿದ್ದಿದೆ. ಅವುಗಳ ಹೆಸರುಗಳನ್ನು ಹೇಗೆ ಹೇಳಲಿ. ಅವುಗಳಲ್ಲಿ ಸುವರ್ಣ ನಾಣ್ಯಗಳು, ಬ್ರೋಚ, ಉಂಗುರ, ಬ್ರೇಸಲೆಟ್ ಮುಂತಾದುವು ಇವೆ. ಸುಂದರವಾದ ಮುತ್ತಿನ ಹಾರದ ಪೆಟ್ಟಿಗೆಯೊಂದಿದೆ. ಅಂತಹದನ್ನು ನಾನೆಲ್ಲಿಯೂ ನೋಡಿರಲಿಲ್ಲ. ಅವೆಲ್ಲವನ್ನು ಪೆಟ್ಟಿಗೆಯಲ್ಲಿ ವ್ಯವಸ್ಥಿತವಾಗಿ ಇಟ್ಟಿದ್ದೇನೆ.

“ಒಳ್ಳೇದು. ಆ ಪೆಟ್ಟಿಗೆಯನ್ನು ತೆಗೆದುಕೊಂಡು ಬಾ.”

ಆ ದಾಸಿಯು ಆ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದು, ಒಳಗಿನ ವಸ್ತುಗಳನ್ನು ಮೇಜಿನ ಮೇಲೆ ಇರಿಸಿದಳು. ಅದೇ ಹೊತ್ತಿಗೆ ಕಂಪೆನಿಯ ಹುಡುಗನು ಒಂದು ಕಾರ್ಡನ್ನು ತಂದು ಕೊಟ್ಟನು. ತಾರೆಯು ಉತ್ಸುಕತೆಯಿಂದ ಅದನ್ನು ಓದಿದಳು “ಇವನ್ನಾರು ಕೊಟ್ಟರು? ಆ ರೇಶಿಮೇ ಪೇಟಾದ ಗೃಹಸ್ಥರೇ?” ಎಂದು ಆ ಹುಡುಗನನ್ನು ಕೇಳಿದಳು.

ತಾರೆಯು ಇನ್ನೊಂದು ಪ್ರಶ್ನೆಯನ್ನು ಮಾಡಲು ಆಸ್ಪದ ಕೊಡದೇ, “ಇದನ್ನು ಮ್ಯಾನೇಜರ ಸಾಹೇಬರು ಕೊಟ್ಟರು” ಎಂದು ಹೇಳುತ್ತಾ ಆ ಹುಡುಗನು ಓಡಿಹೋದನು.

ಪೆಟ್ಟಿಗೆಯನ್ನು ತೆರೆದಾಕ್ಷಣ ಒಂದು ಮನೋಹರ ವಸ್ತುವು ತಾರೆಯ ಮನಸ್ಸನ್ನಾಕರ್ಷಿಸಿತು. ಅಮೌಲ್ಯವಾದ ಮುತ್ತಿನ ಹಾರ ಅಲ್ಲದೇ ಒಂದು ಕಾರ್ಡು ಸಹ ಇದ್ದಿತು. ತಾರೆಯು ಅದನ್ನು ಓದಿದಳು. “ಕುಮಾರ ನಿರ್ಮಲಕಾಂತ ಓ. ಬಿ. ಇ.” ಕೈಯ್ಯಿಂದ ಕಾರ್ಡು ಜಾರಿತು. ತಾರೆಯು ಆ ಕೋಣೆಯಿಂದ ಹೊರಟು ಸಭಾಮಂದಿರವನ್ನು ದಾಟಿ ಮ್ಯಾನೇಜರನ ಆಫೀಸಿಗೆ ಹೋದಳು.

ಮ್ಯಾನೇಜರನು ಆಕೆಗೆ ಖುರ್ಚಿ ಕೊಟ್ಟು ಕೂಡ್ರಹೇಳಿ ಹಿಂದಿನ ರಾತ್ರಿಯ ಅಭಿನಯದ ಪ್ರಶಂಸೆ ಮಾಡಿದನು.

“ಕುಮಾರ ನಿರ್ಮಲಕಾಂತರು ಹೊರಗಿದ್ದಾರೋ? ಆ ಹುಡುಗನು ಏನನ್ನೂ ಕೇಳಲಿಕ್ಕೆ ಆಸ್ಪದ ಕೊಡದೆ ಹೋಗಿಬಿಟ್ಟನು.”

“ನೀವು ನಿನ್ನೆ ರಾತ್ರಿ ನಾಟಕ ಗೃಹವನ್ನು ಬಿಟ್ಟು ಹೋಗುತ್ತಲೇ ಆ ಕಾರ್ಡನ್ನು ಕೊಟ್ಟಿದ್ದರು.”

“ಆಗ ಏಕೆ ಕಳಿಸಲಿಲ್ಲ?”

“ನೀವು ವಿಶ್ರಮಿಸುತ್ತಿರಬಹುದು. ಸುಮ್ಮನೇ ತೊಂದರೆಪಡಿಸುವುದು ವಿಹಿತವಲ್ಲವೆಂದು ಬಿಟ್ಟೆನು. ಸಿಟ್ಟುಮಾಡಬೇಡಿ; ನಿಜವಾಗಿ ಹೇಳಲಾ, ಕುಮಾರ ಸಾಹೇಬರಿಗೆ ನಿಮ್ಮ ಪರಿಚಯ ಮಾಡಿಕೊಡುವುದರಿಂದ ನಿಮ್ಮನ್ನು ಕಳಕೊಳ್ಳಬಹುದೆಂದು ಅಂಜಿದೆನು. ನಾನು ಸ್ತ್ರೀಯಾಗಿದ್ದರೆ ಪಾತಾಳಕ್ಕೆ

ಹೋದರೂ ಅವರನ್ನು ಅನುಸರಿಸದೆ ಬಿಡುತ್ತಿರಲಿಲ್ಲ. ಅಂತಹ ದೈವೀ ಮಾನವನನ್ನು ನಾನೆಲ್ಲಿಯೂ ನೋಡಿರಲಿಲ್ಲ. ರೇಶಿಮೆ ಪೇಟಾ ಕಟ್ಟಿಕೊಂಡು ರಿಝುರ್ವ ಕುರ್ಚಿಯ ಮೇಲೆ ಕುಳಿತವರೇ ಅವರು. ಅವರನ್ನು ನೀವು ನೋಡಿರಬಹುದು?"

"ಹೌದು, ನಾನೂ ನೋಡಿದ್ದೇನೆ." ತಾರೆಯ ದೇಹದಲ್ಲಿ ವಿದ್ಯುತ್ ಸಂಚಾರವಾಯಿತು. "ಅವರು ಮತ್ತೆ ಬರಲಿಕ್ಕಿಲ್ಲವೇ?'

"ಬರುವರು. ಇಂದೇ ಸಾಯಂಕಾಲ ೫ ಗಂಟೆಗೆ ಸರಿಯಾಗಿ ತಪ್ಪದೇ ಬರುತ್ತೇನಾಗಿ ಹೇಳಿದ್ದಾರೆ. ಅವರು ಈ ಪಟ್ಟಣದ ಪ್ರಮುಖ ಗೃಹಸ್ಥರು."

'ಇಂದು ರಂಗಸ್ಥಳಕ್ಕೆ ಹೋಗುವದಿಲ್ಲ' ಎಂದು ಮನಸ್ಸಿನಲ್ಲಿ ಅನ್ನುತ್ತ ಚಂಚಲ ಮನಸ್ಕಳಾಗಿ ಹೋದಳು.

೩

ಕುಮಾರ ಸಾಹೇಬರ ಆಗಮನದ ವೇಳೆಯು ಸಮೀಪಿಸಿತ್ತು. ತಾರೆಯು ನಿಲುಗನ್ನಡಿಯ ಎದುರಿನಲ್ಲಿ ನಿಂತಿದ್ದಳು. ದಾಸಿಯು ತಾರೆಯ ಸೌಂದರ್ಯವನ್ನು ಹೆಚ್ಚಿಸಲು ಶೃಂಗಾರ ಮಾಡುತ್ತಿದ್ದಳು. ಸುವರ್ಣಕ್ಕೆ ಸುವಾಸನೆ ಸೇರಿದಂತಾಯಿತು. ಈಗಿನ ಕಾಲದಲ್ಲಿ ಟೊಯಿಲೆಟ್ ತಯಾರಿಸುವದು ರಸಾಯನ ಶಾಸ್ತ್ರದ ಒಂದು ಭಾಗವೇ ಆಗಿದೆ. ಹಿಂದಿನ ಕಾಲದಲ್ಲಿ ದಿನಚರ್ಯೆಗೆ ಬೇಕಾದ ವಸ್ತುಗಳಿಂದಲೇ ಟೊಯಿಲೆಟ್ ಮಾಡಿಕೊಳ್ಳುತ್ತಿದ್ದರು. ನಮ್ಮ ಪೂರ್ವದ ಕವಿಗಳೂ ಕಲಾಕೋವಿದರೂ ಎಲ್ಲರೂ ಕೂಡಿ ಈ ವಿಷಯದಲ್ಲಿ ಕೆಲವು ಪದ್ಧತಿಗಳನ್ನು ಹಾಕಿಕೊಟ್ಟಿದ್ದರು. ಅಂದರೆ ಕಣ್ಣಿಗೆ ಕಪ್ಪು, ಕೈಕಾಲುಗಳಿಗೆ ಮದರಂಗಿ, ಗಲ್ಲಗಳಿಗೆ ಅರಿಸಿನ, ಪ್ರತೀ ಅವಯವಗಳಿಗೆ ಒಂದೊಂದು ಆಭರಣ. ಅಂಥ ಸುದಿನಗಳು ಕಳೆದುಹೋಗಿ ಎಷ್ಟೋ ವರ್ಷಗಳಾದವು. ಇಂದಿನ ಸ್ತ್ರೀಯರು ತಮ್ಮ ಇಚ್ಛಾನುಸಾರವಾಗಿ ತಮ್ಮ ಜಾಣತನದ ಪ್ರದರ್ಶನಮಾಡಿ ಇಲ್ಲದ ಸಲ್ಲದ ಹೊಸ ವೇಷಗಳಲ್ಲಿಯೇ ಮಗ್ನರಾಗಿರುತ್ತಾರೆ. ಇವೆಲ್ಲವೂ ಏತಕ್ಕೆ? ತಮ್ಮ ಸೌಂದರ್ಯವನ್ನು ಹೇಗಾದರೂ ಹೆಚ್ಚಿಸಿ ಜನಚಿತ್ತಾಕರ್ಷಕರಾಗಬೇ

ಕೆಂಬುದು ಅವರ ಒಂದೇ ಇಚ್ಛೆ. ಟೊಯಿಲೆಟ್ ಕಲೆಯಲ್ಲಿ ಅವಳು ಒಳ್ಳೇ ನಿಪುಣಳಿದ್ದಳು. ಹಿಂದಿನ ಹದಿನೈದು ವರ್ಷಗಳಿಂದಲೂ ರಂಗ ಭೂಮಿಯ ಸೇವೆಯಲ್ಲಿದ್ದಳು. ಅಂಥ ಸುಸಮಯವನ್ನು ತರುಣರ ಹೃದಯವನ್ನಾಕರ್ಷಿಸುವವರಲ್ಲಿ ಕಳೆಯದಿರಲಿಲ್ಲ. ಆದರೆ ಅದರ ದುರುಪಯೋಗ ಮಾಡಿರಲಿಲ್ಲ. ಆ ಓರೆ ನೋಟ, ಆ ಮುಗುಳ್ನಗೆ, ಆ ಅಭಿನಯ ಇವೆಲ್ಲವೂ ಎಂಥವನನ್ನಾದರೂ ತಲೆಬಗ್ಗಿಸುವಂತೆ ಮಾಡದೇ ಇರಲಿಲ್ಲ. ಈ ವಿಷಯದಲ್ಲಿ ಈಕೆಗಿಂತ ನಿಪುಣರು ಯಾರಾದರೂ ಇರಬಹುದೇ? ಇಂದು ತಾರೆಯು ತನ್ನ ಆರಿಸಿದ ಶಸ್ತ್ರಾಸ್ತ್ರಗಳಿಂದ ಪೂರ್ಣ ಆಯುಧಪಾಣಿಯಾಗಿ ತನ್ನ ಕೋಣೆಯಿಂದ ಹೊರಬಿದ್ದಳು. ಆ ಅನಂಗನು ಪೃಥ್ವಿಯ ಸೌಂದರ್ಯವನ್ನು ಒಂದೆಡೆಯಲ್ಲಿ ನೆಲೆಸಿ ಆರನ್ನು ಜಯಿಸಲು ಕಳಿಸಿರಬಹುದು!

ತಾರೆಯ ಪ್ರತಿಬಿಂಬವು ನಿಲುಗನ್ನಡಿಯಲ್ಲಿ ನೆಲೆಸಿತ್ತು. ಆಃ! ಎಂಥ ಚೆಲುವಾದ ಮುಖಮಂಡಲ. ಕಪ್ಪು ನೀಲಮಣಿಯ ಹಾಗಿರುವ ಕಣ್ಣು ಗುಡ್ಡೆಗಳು. ಇಂಬಾದ ಕಣ್ಣುಗಳು. ಹಾವಿನ ಬಾಲದಂತಿರುವ ಕಪ್ಪು ಹುಬ್ಬುಗಳು. ಕಪ್ಪಾದ ಮುಂಗುರುಳು. ಇವು ಅವಳ ಅಂದವಾದ ಕಾಂತಿಯನ್ನು ಹೆಚ್ಚಿಸುತ್ತಿದ್ದವು. ನಮ್ಮ ತಾರೆಯು ಆ ನಿಮ್ಮ "ಸುರತ ನಗರದ ಶ್ರೇಷ್ಠಿಯ" "ತಾರಾದೇವಿ"ಗಿಂತಲೂ ಸೌಂದರ್ಯವತಿ. ತಾರೆಯ ಸೌಂದರ್ಯವನ್ನು ವರ್ಣಿಸಲು ಶಬ್ದಕೋಶದಲ್ಲಿ ಯೋಗ್ಯ ಶಬ್ದಗಳೇ ಸಿಗವು. ಹೆಚ್ಚೇನು ಹೇಳಲಿ! ವಾಚಕರೆ! ಪುರುಷ ಪಾಠಕರನ್ನು ಕುರಿತು- ನೀವು ನಿಮ್ಮ ಪ್ರಿಯತಮೆಯರ ರೂಪಕಾಂತಿಯನ್ನು ನೋಡಿದರೆ ಅವರು ಎಷ್ಟು ಸುಂದರಿಯರೆಂದು ಮೋಹಿತರಾಗುತ್ತೀರೋ, - ಸ್ತ್ರೀಪಾಠಕರನ್ನು ಕುರಿತು— ನೀವು ನಿರ್ಮಲವಾದ ಮುಕುರದಲ್ಲಿ ನಿಮ್ಮ ಮುಖವನ್ನು ನೋಡಿದರೆ ಎಷ್ಟು ಸುಂದರಿಯೆಂದು ಭಾವಿಸುತ್ತೀರೋ, ಅದಕ್ಕಿಂತಲೂ ಹೆಚ್ಚು ಸೌಂದರ್ಯವತಿ.

ತಾರೆಯು ಮೇಜಿಗೊರಗಿ ನಿಂತಿದ್ದಳು. ಕೈಯಲ್ಲಿದ್ದ ಕುಮಾರನ ಕಾರ್ಡನ್ನು ಉತ್ಸುಕಳಾಗಿ ನೋಡುತ್ತಿದ್ದಳು. ಆದರೆ ಕಿವಿಯು ಮಾತ್ರ ಮೋಟಾರಿನ ಧ್ವನಿಯ ಕಡೆಗೇ, 'ತಾನು ಈ ಪೋಜಿನಲ್ಲಿದ್ದಾಗ ಅವರು

ನನ್ನನ್ನು ನೋಡಿದ್ದರೆ ಎಷ್ಟು ಚೆನ್ನಾಗಿತ್ತು!' ಯಾಕಂದರೆ ಆ ಪ್ರೋಜ ಅವಳ ಪ್ರತಿಯೊಂದು ಅವಯವದ ಸೌಂದರ್ಯವನ್ನು ತೋರ್ಪಡಿಸುತ್ತಿದ್ದಿತು. ಹೊತ್ತು ಹೋಗಲೊಲ್ಲದು. ಬೇಸರವೆನಿಸಹತ್ತಿತು. ವಯಕ್ಕೂ ಪ್ರೇಮಕ್ಕೂ ಏನು ಸಂಬಂಧವಿದೆ! ವಿಶ್ರಾಮ ತೆಗೆದುಕೊಳ್ಳುವ ವಯಸ್ಸಾದಾಗ್ಯೂ ಅದೇ ಆಗ ಮಾತ್ರ ಮದನನು ತಾರೆಯ ಹೃದಯ ಹರಿಣವನ್ನು ಕುಸುಮಶರಗಳಿಂದ ಗಾಸಿಮಾಡುತ್ತಿದ್ದನು. ವಯೋಗರ್ವವು ಕೂಡ ಅಲೌಕಿಕ ಪ್ರೇಮದ ಮುಂದೆ ಮುಖ ಭಂಜಿತವಾಯಿತು.

ತಾರಾದೇವಿಯು ಬಹಳ ಹೊತ್ತು ದಾರೀ ನಿರೀಕ್ಷಿಸುತ್ತ ನಿಲ್ಲಬೇಕಾಗಲಿಲ್ಲ. ಕುಮಾರ ನಿರ್ಮಲನಾದರೂ ಅವಳ ಭೆಟ್ಟಿಗೋಸ್ಕರ ಅಷ್ಟೇ ಆತುರನಾಗಿದ್ದನು. ಹತ್ತು ನಿಮಿಷಗಳೊಳಗಾಗಿ ಬಸ್ಸಿನ ಧ್ವನಿಯಾಯಿತು. ತಾರೆಯು ಮನೋಧೈರ್ಯವನ್ನು ಒಂದೆಡೆಯಲ್ಲಿಯೇ ನಿಲ್ಲಿಸಲು ಯತ್ನಿಸಿದಳು. ನಿಮಿಷಾರ್ಧದಲ್ಲಿ ನಿರ್ಮಲಕಾಂತನು ಅವಳೆದುರಿನಲ್ಲಿ ಪ್ರತ್ಯಕ್ಷನಾದನು. ತಾರೆಯು ತನ್ನನ್ನು ಮರೆತಳು. ಹಸ್ತಾಂದೋಲನ ಮಾಡಲು ಕೂಡ ಮರೆತಳು. ನೋಡಿದಿರಾ! ಪ್ರೇಮವು ಎಂಥ ಅವಿಚಾರಿಯು. ಎಷ್ಟು ಮೂಢವು. ತಾರೆಯು ಮಾತಾಡಲು ಹವಣಿಸಿದಳು. ಆದರೆ ಆಗಲಿಲ್ಲ. ಲಜ್ಜೆಯಿಂದ ತಲೆ ಬಾಗಿಸಿದಳು. ಮೋರೆ ಬೆವರಿತು.

"ಕ್ಷಮಿಸಿರಿ. ಅನುಚಿತ ವೇಳೆಯಲ್ಲಿ ನಿಮಗೆ ಸುಮ್ಮನೇ ತೊಂದರೆ ಕೊಟ್ಟಂತಾಯಿತು. ಇದು ನಿಮ್ಮ ವಿಶ್ರಾಂತಿಯ ವೇಳೆ" ಎಂದು ನಿರ್ಮಲನು ಅಂದನು.

"ತಮ್ಮನ್ನು ಕಾಣುವುದಕ್ಕಿಂತ ಹೆಚ್ಚಿನ ವಿಶ್ರಾಂತಿ ಯಾವದು?" ಭುಜದಿಂದೋರೆಯಾದ ಸೆರಗನ್ನು ಸರಿಪಡಿಸುತ್ತ, "ತಮ್ಮ ಬಹುಮಾನಕ್ಕಾಗಿ ಬಹಳೇ ಆಭಾರಿಯಾಗಿದ್ದೇನೆ. ತಮ್ಮನ್ನು ಪದೇ ಪದೇ ಭೆಟ್ಟಿಯಾಗಬಹುದಾಗಿ ಆಶಿಸುತ್ತೇನೆ" ಎಂದಳು.

"ಓಹೋ ಪ್ರತಿದಿನ ಭೆಟ್ಟಿಯಾಗಬಹುದು." ನಿರ್ಮಲಕಾಂತನು ತನ್ನ ಕೆಂದುಟಿಯ ಮಧ್ಯ ತಾರಾಮಂಡಲದಲ್ಲಿ ಶೋಭಿಸುವ ಚಂದ್ರನಂದದ ಬಿಳುಪಾದ ಹಲ್ಲುಗಳನ್ನು ತೋರ್ಪಡಿಸುತ್ತ, "ನಿಮಗೆ

ನೋಡಲು ಸೇರದಿದ್ದರೂ, ನಾನಂತೂ ಪ್ರತಿದಿನ ಒಮ್ಮೆ ನಿಮ್ಮ ಬಾಗಲಿಗೆ ಬರುವ ಪರಿಪಾಠವನ್ನೇ ಇಡುವೆನು.''

''ಇರಬಹುದು. ಅನ್ಯದೊಂದು ವ್ಯಕ್ತಿಯು ನಿಮ್ಮ ಮನೋಹರಣ ಮಾಡುವ ವರೆಗಲ್ಲವೇ?'' ಎಂದು ಮಂದಹಾಸದಿಂದ ಮುಂಗುರುಳುಗಳನ್ನು ತಿದ್ದುತ್ತಾ ನುಡಿದಳು.

''ನೀವು ಹೇಗಾದರೂ ತಿಳಿಯಬಹುದು. ನಿಮ್ಮ ಸೌಖ್ಯಕ್ಕಾಗಿ ನನ್ನ ಪ್ರಾಣಾರ್ಪಣ ಮಾಡಲು ಸಿದ್ಧನಿದ್ದೇನೆ. ಚನ್ನಾಗಿ ಲಕ್ಷ್ಯದಲ್ಲಿಡಿರಿ. ಸುಮ್ಮನೇ ಕಾಮುಕನಾಗಿ ಹೀಗೆ ನುಡಿಯುತ್ತಿರುವೆನೆಂದು ಮಾತ್ರ ತಿಳಿಯ ಬೇಡಿರಿ.''

ತಾರೆಯ ಆಜ್ಞಾನುಸಾರ ದಾಸಿಯು ಸಿಲ್ವರಟ್ರೇದಲ್ಲಿ ಟಿಫಿನ್ ತಂದಿಟ್ಟಳು. ಇರ್ವರೂ ಫಲಹಾರ ತೀರಿಸಿದರು. ಕುಮಾರ ನಿರ್ಮಲನು ತಾರೆಗೆ ಮರುದಿನ ಊಟಕ್ಕೆ ಔತಣಕೊಟ್ಟು ಹೊರಟನು.

ಇರ್ವರ ಹೃದಯಗಳೊಂದಾದವು. ತರುಣ ತರುಣಿಯರ ಸ್ನೇಹವು ಪ್ರೇಮದಲ್ಲಿ ಪರಿಣಮಿಸಿತೆಂದು ಹೇಳುವ ಕಥೆಗಾರನ ಫಲಿತಾರ್ಥವೂ ''ಮಳೆಬಂದಲ್ಲಿ ಕೆಸರಾದೀತ್ತೈ'' ಎಂದು ಹೇಳುವ ಬುಡುಬುಡಿಗನ ಭವಿಷ್ಯವೂ ಒಂದೇ ಸರಿ.

೪

ಒಂದು ಮಾಸವು ಕಳೆಯಿತು. ಕುಮಾರನು ತಾರೆಯನ್ನು ನೋಡಲು ದಿನಕ್ಕೆಷ್ಟೋ ಸಲ ಬರುತ್ತಿದ್ದನು. ಅವಳನ್ನು ಕ್ಷಣ ಸಹ ಅಗಲಿರುವದು ಸಹ ಅವನಿಗೆ ಅಶಕ್ಯವೆನಿಸಹತ್ತಿತು. ಇರ್ವರೂ ದಿನೇ ದಿನೇ ಅನೇಕ ರೀತಿಯಿಂದ ಮನರಂಜನೆ ಮಾಡಿಕೊಳ್ಳುತ್ತಿದ್ದರು. ಹುಣ್ಣಿಮೆಯ ದಿನ ಚಂದ್ರನ ಶೀತಲ ಕಿರಣಗಳನ್ನು ಅನುಭವಿಸಲು ವಿಹಾರ ದೋಣಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇಂದು ನೃತ್ಯ, ನಾಳೆ ಗಾಯನ, ಮರುದಿನ ವಿಹಾರವನ, ಮುಂತಾದ ರೀತಿಯಿಂದ ಹೊತ್ತು ಕಳೆಯುತ್ತಿದ್ದರು. 'ಕುಮಾರ ಸಾಹೇಬರು ತಾರೆಯ ಬಲೆಯಲ್ಲಿ ಸಿಕ್ಕಿದ್ದಾರೆ. ಅವಳು ಅವರ ಸರ್ವಸ್ವವನ್ನು ಹರಣಮಾಡದೇ ಬಿಡಲಿಕ್ಕಿಲ್ಲ' ಎಂದು

ಪಟ್ಟಣ ತುಂಬ ಜನರು ಮಾತಾಡಹತ್ತಿದರು. ಆದರೆ ತಾರೆಯು ಕುಮಾರ ನಿರ್ಮಲನ ನಿರ್ಮಲ ಪ್ರೇಮದ ಮುಂದೆ ಇಡೀ ಭೂಮಂಡಲದ ದ್ರವ್ಯ ವನ್ನೆಲ್ಲ ತುಚ್ಛೀಕರಿಸುತ್ತಿದ್ದಳು. ಕುಮಾರನು ಅವಳೆದುರಿನಲ್ಲಿದ್ದರೆ ಆಕೆಗೆ ಹಸಿವೆ ಕೂಡ ಆಗುತ್ತಿರಲಿಲ್ಲ.

ಪ್ರೇಮ ನಿರ್ಝರದಲ್ಲಿ ಅವರು ಅನೇಕ ಸಲ ಕೂಡಿದ್ದರೂ, ತಾರೆಯ ಹೃದಯದ ಬೇಡಿಕೆಯು ಮಾತ್ರ ಸಂಪೂರ್ಣವಾಗಿರಲಿಲ್ಲ. ಪ್ರತಿ ದಿನ ಕುಮಾರನು ತನ್ನ ನಿರ್ಮಲ ಪ್ರೇಮದ ನಿಶ್ಚಲತೆಯ ಬಗ್ಗೆ ಮಾತಾಡು ತ್ತಿದ್ದನು. ಆದರೆ "ವಿವಾಹ"ವೆಂಬ ಶಬ್ದವು ಮಾತ್ರ ಬರಲಿಲ್ಲ. ನೀರಡಿ ಸಿದ ಪ್ರಯಾಣಿಕರಿಗೆ ಪೇಟೆಯಲ್ಲಿ ಎಲ್ಲವೂ ಸಿಕ್ಕುತ್ತದೆ; ಆದರೆ ನೀರು ಮಾತ್ರ ಸಿಕ್ಕದಿದ್ದರೆ ಆತನ ಸ್ಥಿತಿಯು ಹೇಗಾಗಬಹುದು? ಅದರಂತೆಯೇ ತಾರೆಯ ಸ್ಥಿತಿಯಾಗಿತ್ತು. ನೀರು ಕುಡಿದ ಮೇಲೆ ಆತನು ಬೇರೆ ಜೀನಸುಗಳನ್ನು ತಿನ್ನಲು ಇಚ್ಛಿಸಬಹುದು. ಆದರೆ ಮುಖ್ಯತಃ ಬೇಕಾದದ್ದು ನೀರು. ತಾರೆಯು ಇಚ್ಛಿಸಿದಲ್ಲಿ ಕುಮಾರನು ಪ್ರಾಣಕೊಡಲು ಕೂಡ ಹಿಂಜರಿಯನೆಂಬುದು ಗೊತ್ತಿತ್ತು. ಹಾಗಾದರೆ ಅವನು "ವಿವಾಹ"ದ ಸುದ್ದಿಯನ್ನೇಕೆ ಮಾತಾಡನು? ಲೇಖನಿಯಿಂದಾದರೂ ತನ್ನ ಇಚ್ಛೆಯನ್ನು ಏಕೆ ವಿಶದಪಡಿಸನು? ಹಾಗಾದರೆ ಆಕೆಯನ್ನು ತನ್ನ ಉಪಪತ್ನಿಯನ್ನಾಗಿ ಮಾಡಿಕೊಳ್ಳಬೇಕೆಂದಿರುವನೋ? ಅಂಥ ಅಪಮಾನವನ್ನು ಅವಳೆಂದಿಗೂ ಸಹಿಸಳು. ಅವನ ಇಚ್ಛಾಮಾತ್ರ ತಪ್ತತೈಲದಲ್ಲಿ ಇಲ್ಲವೇ ಉಗ್ರ ಬೆಂಕಿ ಯಲ್ಲಿ ಪ್ರಾಣಾರ್ಪಿಸಲು ಸಿದ್ಧಳಿದ್ದಳು. ಇಂಥ ಅಪಮಾನವನ್ನು ಮಾತ್ರ ಎಂದಿಗೂ ಸಹಿಸಳು. ಅಂಥ ಶ್ರೀಮಂತನ ಸಹವಾಸದಲ್ಲಿ ಈ ಒಂದೆರಡು ತಿಂಗಳು ಕಳೆದವಳು ಇಚ್ಛಾಮಾತ್ರ ಅವನ ಐಶ್ವರ್ಯದ ಯಜಮಾನಿ ಯಾಗುತ್ತಿದ್ದಳು. ಆದರೆ ಪ್ರೇಮವು ಪ್ರೇಮವನ್ನೇ ಬಯಸುತ್ತದೆ. 'ಮೃಗರಾಜನು ಎಷ್ಟೇ ಹಸಿದಾಗ್ಯೂ ಮಾಂಸವನ್ನಲ್ಲದೆ ಹುಲ್ಲನ್ನು ತಿನ್ನಲಾರನು'. ತಾರೆಯು ಕುಮಾರನೊಂದಿಗೆ ಅಂಥ ಲಜ್ಜಾಸ್ಪದ ಜೀವನ ವನ್ನೆಂದಿಗೂ ಕಳೆಯಲಾರಳು.

ಕುಮಾರ ನಿರ್ಮಲನ ಸ್ನೇಹಿತರು, ಸಂಬಂಧಿಕರು, ಹಿತೇಚ್ಛುಗಳು ಈ ಬದಲಾವಣೆಯನ್ನು ನೋಡುತ್ತ ಸುಮ್ಮನೇ ಕೂಡಿರಲಿಲ್ಲ. ಹ್ಯಾಗಾದರೂ

ಕುಮಾರನನ್ನು ತಾರೆಯಿಂದ ದೂರಪಡಿಸಬೇಕೆಂದಿದ್ದರು. ಕುಮಾರನ ಲಗ್ನ ನಿಶ್ಚಯಿಸಿದ ಹೊರತು ಇದು ಸಾಧ್ಯವಿರಲಿಲ್ಲ. ಆತನ ಸ್ನೇಹಿತರು ಇದರಲ್ಲಿ ಯಶಸ್ವಿಯಾದಂತೆ ತೋರಿತು. ಕುಮಾರನು ತನ್ನ ಆಸ್ತಿಯನ್ನು ತಾರೆಗೆ ಅಥವಾ ಆಕೆಯಿಂದ ಹುಟ್ಟಿದ ಶಿಶುವಿಗೆ ಎಲ್ಲ ಬರೆದು ಕೊಡುವನೋ ಎಂದು ಅಂಜಿದ್ದರು. ಇನ್ನು ವಧು ನಿಶ್ಚಯ ಮಾತ್ರ ಉಳಿದಿತ್ತು.

ಸಾಯಂಕಾಲವಾಗುವದಕ್ಕೆ ಬಹಳ ಹೊತ್ತು ಇರಲಿಲ್ಲ. ಸುವರ್ಣದ ದೊಡ್ಡ ಬಟ್ಟಲ ಹಾಗೆ ಸೂರ್ಯನ ಅರ್ಧ ಭಾಗವು ಮಾತ್ರ ಪಶ್ಚಿಮ ಗಗನದ ಅಂತ್ಯದಲ್ಲಿ ಕಾಣುತ್ತಿತ್ತು. ಸುವರ್ಣದ ರಶ್ಮಿಯು, ಮರಗಳ ಶಿರಗಳಲ್ಲಿಯೂ, ವಸಂತದಲ್ಲಿ ಹುಟ್ಟಿದ ಚಿಗುರೆಲೆಗಳಲ್ಲಿಯೂ, ದೊಡ್ಡ ದೊಡ್ಡ ಮನೆಗಳ ಬಿಳುಪಾದ ಗೋಡೆಗಳ ಮೇಲೂ, ಸರ್ಪದ ಹಾಗೆ ನಲಿಯುತ್ತಲೂ ಅಲೆಗಳ ಹಾಗೆ ಅಲೆಯುತ್ತಲೂ ಭ್ರಮರಗಳ ಹಾಗೆ ಕಪ್ಪಾಗಿಯೂ ಸಂಜೆಯ ಪೂಗಾಳಿಯಲ್ಲಿ ಸ್ವಲ್ಪ ಸ್ವಲ್ಪ ಅಲುಗಾಡುತ್ತಲೂ ಇದ್ದ ಮುಕ್ತವೇಣಿಯುಳ್ಳವರಾದ ಮಹಡಿಯ ಮೇಲೆ ನಾನಾ ವಿಧ ವಸ್ತ್ರಗಳನುಟ್ಟು ನಿಂತಿದ್ದ ಯೌವನ ಸುಂದರಿಯರ ಮುಂಗುರುಳುಗಳ ಮೇಲೂ, ಅವುಗಳ ಮಧ್ಯ ಇದ್ದ ಹೆಚ್ಚು ರಕ್ತವರ್ಣದ ಅಧರಗಳಲ್ಲಿಯೂ ಮನ್ಮಥನ ಸ್ವಪ್ನ ಶಯ್ಯೆಗೆ ಸಮಾನವಾದ ಇಂಬಾದ ಕಣ್ಣುಗಳಲ್ಲಿಯೂ, ಸಪ್ತಮಿ ಚಂದ್ರನ ಹಾಗಿದ್ದ ಹಣೆಯಲ್ಲಿಯೂ ಪಟ್ಟಣದ ಒಂದು ಪಾರ್ಶ್ವದಲ್ಲಿ ಹರಿಯುತ್ತಿದ್ದ ಗಂಗಾನದಿಯ ನೀರಿನ ಮೇಲೂ ಪ್ರಕಾಶಿಸುತ್ತ ಸುಂದರಿಯಾದ ಸಂಧ್ಯಾಬಾಲೆಯನ್ನು ತರ ತರದ ವರ್ಣದ ವಸ್ತ್ರಗಳಿಂದ ಅಲಂಕರಿಸಿದ್ದಿತು.

ಇಂಥ ಗೋಧೂಳೀ ಸಮಯದಲ್ಲಿ ಓರ್ವ ತರುಣಿಯು ಉತ್ಸುಕತೆಯಿಂದ ದಾರಿ ನೋಡುತ್ತ ಪ್ರಗ್ರೀವಕ್ಕೆ ಒರಗಿ ಕಪೋಲಕ್ಕೆ ಕೈಹಚ್ಚಿಕೊಂಡು ನಿಂತಿದ್ದಳು. ಅದೇ ಪಶ್ಚಿಮ ಗಿರಿಶಿಖರವನ್ನೇರುತ್ತಿದ್ದ ಸೂರ್ಯನ ಸುವರ್ಣ ಕಿರಣಗಳು ಆ ಲಲನೆಯ ಸೌಂದರ್ಯವನ್ನು ಹೆಚ್ಚಿಸುತ್ತಿದ್ದವು. ದೂರದಲ್ಲಿ ಒಂದು ಬಸ್ಸು ಸಾವಕಾಶವಾಗಿ ಬರುತ್ತಲಿತ್ತು. ತರುಣಿಯು ನಿಂತ ಗೃಹದ ಸಮೀಪಕ್ಕೆ ಬಂದಿತು. ಬಸ್ಸಿನಲ್ಲಿ ಓರ್ವ ಶ್ರೀಮಂತ ತರುಣನಲ್ಲದೆ ಇಬ್ಬರು ಜವಾನರಿದ್ದರು. ತರುಣ ತರುಣಿಯರ ದೃಷ್ಟಿಯು ಏಕತ್ರವಾದವು. ತರುಣಿಯು ಧಾವಿಸಿ, ಮಹಡಿಯಿಂದಿ

ಳಿದವಳು ತರುಣನ ಹಸ್ತದಲ್ಲಿ ತನ್ನ ಕೋಮಲ ಹಸ್ತವನ್ನಿಕ್ಕಿ ಅಪೂರ್ವ ಸ್ವಾಗತ ಮಾಡಿದಳು.

ಈರ್ವರೂ ಏಕಾಂತ ನಿವಾಸಕ್ಕೆ ತೆರಳಿದರು.

"ತಾರ, ಇದು ನೋಡು. ನನಗೊಂದು ಭಿಕ್ಷೆ ನೀಡುವೆಯಾ? ಒಲ್ಲೆನೆನಬೇಡ."

ತಾರೆಯ ಹೃದಯವು ಒತ್ತರದಿಂದ ಹಾರಲಾರಂಭಿಸಿತು. "ಅದೇನು ಹೇಳಿರಿ. ಎಂದಾದರೂ ತಮ್ಮ ಮನದ ವಿರುದ್ಧವಾಗಿ ನಡೆದಿದ್ದೆನೆ? ಸಂಕೋಚವೇಕೆ?"

ಕುಮಾರನ ಕೆಂದುಟಿಯಿಂದ ಭಿಕ್ಷೆಯ ಮುತ್ತು ಉದುರುತ್ತಲೇ ತಾರೆಗೆ ಆನಂದಾತಿರೇಕವಾಗಿ ಅಶ್ರುಗಳು ಉದುರಿದವು. ಆನಂದಭರದಲ್ಲಿ ತಾರೆಯು ಕುಮಾರನ ಬಾಹುಪಾಶದಲ್ಲಿ ಸಿಲುಕಿದಳು. ಕುಮಾರನು ತಾರೆಯ ಅಧರ ಚುಂಬಿಸಲು ಮುಂದೆ ಬಾಗಿದನು. ತಾರೆಯು ಮಾತ್ರ, "ಬೇಡ, ಈ ನಿರ್ಭಾಗ್ಯಗಳಿಗೆ ನಿಮ್ಮ ಚುಂಬನವನ್ನು ಅನುಭವಿಸಲು ಯೋಗ್ಯತೆಯಲ್ಲಿದೆ? ಸ್ವಲ್ಪ ತಡೆಯಿರಿ, ಅದಕ್ಕೆ ಅವಕಾಶವಿದೆ" ಎಂದನ್ನುತ್ತಾ ಬಾಹು ಪಾಶದಿಂದ ಬಿಡುಗಡೆ ಹೊಂದಿ ಹಂಸತೂಲಿಕಾ ತಲ್ಪದ ಮೇಲೆ ಒರಗಿದಳು.

೫

"ತಾವು ನನ್ನನ್ನು ವರಿಸುವಿರೆಂಬ ಆಶೆಯೇ ಅಳಿದಿತ್ತು. ನನ್ನನ್ನು ಇಷ್ಟು ಕಠಿನವಾಗಿ ಪರೀಕ್ಷಿಸಬೇಕಾಯಿತಲ್ಲವೇ?"

ಕುಮಾರನು ತಾನೇನಾದರೂ ಅಸಂಬದ್ಧವನ್ನು ನುಡಿದೆನೆಂದು ನಾಲಿಗೆ ಕಚ್ಚಿಕೊಂಡನು. "ತಾರಾ, ಹಾಗೆ ತಿಳಿಯಬೇಡ. ನೀನು ಇದಕ್ಕೆ ಅನುಕೂಲಳಾಗಿದ್ದಿಯೆಂದು ಗೊತ್ತಾಗಿದ್ದರೆ, ನಿನ್ನನ್ನು ನೋಡಿದ ದಿನವೇ ಕೇಳುತ್ತಿದ್ದೆ. ನನ್ನನ್ನು ಪರೀಕ್ಷಿಸಿ ನೋಡು, ನಿಜವಾಗಿ ಹೇಳು. ನಾನು ನಿನಗೆ ಯೋಗ್ಯನಿರುವೆನೇ? ನಿನ್ನಲ್ಲಿ ವಿದ್ವತ್ತಿದೆ. ನನ್ನಲ್ಲಿ . . . . .? ನನ್ನನ್ನು ಪೂರ್ಣವಾಗಿ ಬಲ್ಲಿ. ನನ್ನ ಆಯುಷ್ಯವನ್ನು ನಿನ್ನ ಸೇವೆಯಲ್ಲಿ ಕಳೆಯ

ಬೇಕೆಂದಿರುವೆನು. ಇದೊಂದೇ ನನ್ನ ಮಹತ್ವಾಕಾಂಕ್ಷೆ. ನನ್ನಲ್ಲಿ ಒಳ್ಳೆ ಗುಣವಿದ್ದರೆ—ಅದು ನಿನ್ನನ್ನು ಪ್ರೀತಿಸುತ್ತಿರುವೆನೆಂಬುದು. ಅಲ್ಲದೇ ಇನ್ನಾವುದೂ ಇಲ್ಲ. ಭಾಷಾ, ಧರ್ಮ, ನೃತ್ಯ, ಗಾಯನ ಇವುಗಳ ಮೇಲೆ ನಿನ್ನ ಮತವನ್ನು ಕೊಡುತ್ತಿರುವಾಗ, ನನ್ನ ಅಲ್ಪ ವಿದ್ಯೆಯನ್ನು ನೋಡಿ ನಾಚಿಕೆಯಾಗುತ್ತದೆ. ನೀನು ಅಪ್ಸರೆಯೆಂದೇ ತಿಳಿದಿರುವೆನು. ನಿನ್ನನ್ನು ಹೊಂದಿದ್ದಕ್ಕಾಗಿ ಅನಂದೋನ್ಮಾದವಾಗದಿದ್ದದ್ದು ನನ್ನ ಸುದೈವ.''

ಈ ಪ್ರಕಾರ ಮಧ್ಯರಾತ್ರಿಯ ವರೆಗೆ ತನ್ನ ಹೃದಯ ನಿರೂಪಣೆ ಮಾಡಿದನು. ಅವನೆಂದೂ ಇಷ್ಟು ಮಾತಾಡಿದವನಲ್ಲ. ಇಂದು ಅವನಲ್ಲಿ ನವ ಚೈತನ್ಯ ಉಂಟಾಗಿದ್ದಿತು.

ಆಕೆಯು ಎಲ್ಲವನ್ನು ಕೇಳುತ್ತ ಅಧೋಮುಖಿಯಾಗಿ ಕುಳಿತಿದ್ದಳು. ಮೋರೆಯ ಮೇಲೆ ಆನಂದ ಕಳೆಯ ಬದಲಾಗಿ ಅಸಹ್ಯ ವೇದನೆಯು ತೋರುತ್ತಿತ್ತು. ಅಹಾ! ಕುಮಾರನೆಷ್ಟು ನಮ್ರನು! ಎಷ್ಟು ಉದಾರ ಹೃದಯದವನು!!

''ನನ್ನ ಸೌಖ್ಯದ ಸುದಿನದ ಅರುಣೋದಯವು ಎಂದಾಗಬಹುದು? ಪ್ರಿಯೇ, ವ್ಯರ್ಥ ದಿನಹರಣ ಮಾಡುವದರಲ್ಲೇನು ಪ್ರಯೋಜನ?"

ಕುಮಾರ ನಿರ್ಮಲನ ನಿರ್ಮಲ ಹೃದಯವನ್ನು ನೋಡಿ, ''ನಮ್ಮ ವಿವಾಹಕ್ಕೆ ಸಮಾಜವೊಂದು ಅಡ್ಡಿಯಾಗುತ್ತದಲ್ಲಾ?'' ಎಂದಳು.

''ಅದಕ್ಕೆ ಚಿಂತಿಸುವದು ಬೇಡ, ಮುಂಚಿತವಾಗಿ ಅವನ್ನೆಲ್ಲ ವಿಚಾರಿಸಿದ್ದೇನೆ. ''ಸಿವ್ಹಿಲ್ ಮ್ಯಾರಿಯೇಜ್ ಎಕ್ಟ'' ಎಂಬ ಕಾಯಿದೆಯ ಆಧಾರವಿದೆ. ಕಾಯಿದೆಯಿಂದಲೇ ನಾವು ವಿವಾಹವಾಗಬಹುದು. ಈ ವಾರದ ಕೊನೆಯ ದಿನವೇ ಆ ಶುಭದಿನವಾಗಬಹುದೇ?''

ತಾರೆಯಿಂದ ಮಾತಾಡಲು ಆಗಲಿಲ್ಲ. ತಲೆಹಾಕಿದಳು ಮಾತ್ರ.

''ಪ್ರಿಯೇ, ಆ ದಿನ ಅರುಣೋದಯದಲ್ಲಿಯೇ ಕರೆಯಲು ಬರುತ್ತೇನೆ. ಎಲ್ಲ ಸಿದ್ಧತೆಯಾಗಿರಲಿ! ತಿಳಿಯಿತೇ?"

ಆಕೆಯು ಇದು ವರೆಗೂ ಅಧೋಮುಖಿಯಾಗಿದ್ದಳು. ಕುಮಾರನು ಹೋದರೂ ಸಹ ಆಕೆಯು ಕಲ್ಲುಗೊಂಬೆಯಂತೆ ಅಲ್ಲಿಯೇ ನಿಂತಿದ್ದಳು.

## ೬

ಸೂರ್ಯನು ಅಸ್ತಾಚಲವನ್ನೈದಿದನು. ಹೃದಯ ಚಕೋರ ಚಂದ್ರನನ್ನು ವಿವಾಹ ಬಂಧನದಿಂದ ಕೂಡುವ ಸುದಿನದ ಹಿಂದಿನ ರಾತ್ರಿ. ತಾರೆಯು ಪರಿಚಯಸ್ಥರಿಂದಲೂ ಮಿತ್ರರಿಂದಲೂ ಅಭಿನಂದನವು ಬಂದಿತ್ತು. ಆಕೆಯು ಅಭಿನಯಿಸಿದ ಪ್ರತಿಯೊಂದು ನಾಟಕ ಮಂಡಲಿಯವರು ಅವರ ಯೋಗ್ಯತಾನುಸಾರವಾಗಿ ವಿವಾಹಕ್ಕೆ ಉಡುಗೆರೆಗಳನ್ನು ಕಳುಹಿಸಿದ್ದರು. ಅವಳಾ ಸುಂದರ ಮುಖದ ಮೇಲೆ ಆನಂದದ ಚಿನ್ಹೆಗಳೊಂದೂ ಕಾಣುತ್ತಿರಲಿಲ್ಲ. ಆಕೆಗೆ ಬಹು ಸಂಕಟವಾಗುತ್ತಿತ್ತು. ಮೋರೆಯು ಕಂದಿತ್ತು. ಹಿಂದಿನ ನಾಲ್ಕು ದಿನಗಳಿಂದ ಒಂದೇ ಒಂದು ಪ್ರಶ್ನೆಯು ಅವಳ ಹೃದಯದಲ್ಲಿ ಕಟಿಯುತ್ತಿತ್ತು. “ಕುಮಾರ ಸಾಹೇಬರನ್ನು ವಂಚಿಸಲಾ?” ಯಾರು ಮನೆತನದ ಗೌರವವನ್ನು ಕೂಡಾ ಲಕ್ಷಿಸದೆ ಒಡಹುಟ್ಟಿದವರ, ಸಂಬಂಧಿಕರ, ಸ್ನೇಹಿತರ, ಮಾತನ್ನು ಅಲ್ಲಗಳೆಯಲು, ಅದೇಕೆ ಸರ್ವಸ್ವವನ್ನು ಧಾರೆಯೆರೆಯಲು ಸಿದ್ಧನಾಗಿದ್ದನೋ ಅಂಥ ಪ್ರೇಮ ಪುತ್ಥಳಿಯನ್ನು-ಅತ್ಯುನ್ನತ ಗಿರಿಶಿಖರದಂತೆ ಸುಂದರವಾಗಿಯೂ ಅದೇ ಅಂಬರದಿಂದುದುರಿದ ಆಣೇಕಲ್ಲಿನಂತೆ ಶುಭ್ರವಾದ ಹೃದಯವುಳ್ಳ ಸುಕುಮಾರನನ್ನು—ವಂಚಿಸುವದೇ? ಇಲ್ಲ! ಅವಳು ಅಷ್ಟು ಕೃತಘ್ನಳಾಗಲಿಕ್ಕಿಲ್ಲ. ತರುಣಾವಸ್ಥೆಯಲ್ಲಿ ಅನೇಕರನ್ನು ನಿರಾಶೆ ಪಡಿಸಿದ್ದಳು. ಆದರೆ ಅವಳ ಹೃದಯವು ಇಂದಿನಷ್ಟು ಎಂದೂ ಡೋಲಾಯಮಾನವಾಗಿರಲಿಲ್ಲ. ಇಷ್ಟು ತಳಮಳಿಸಿದ್ದಿಲ್ಲ. ಅದರ ಕಾರಣವು ಏನಿರಬಹುದು? ಹಿಂದೆ ಅವಳಿಗೆ ಇಂಥ ಪ್ರೇಮದ ಅನುಭವವಿರಲಿಕ್ಕಿಲ್ಲವೆ?

ಕುಮಾರನ ಆಯುಷ್ಯವನ್ನು ಸೌಖ್ಯವಾಗಿಯೂ ಆನಂದದಾಯಕವಾಗಿಯೂ ಮಾಡಲಾರಳೇ? ಖಂಡಿತವಾಗಿಯೂ ಮಾಡಬಲ್ಲಳು. ಯಾವ ಸಂಶಯವೂ ಇರಲಿಲ್ಲ. ಪವಿತ್ರ ಪ್ರೇಮವೊಂದಿರಲು ಯಾವದು ತಾನೇ ಅಶಕ್ಯ. ಆದರೆ ಅಸ್ತಂಗತನಾಗುತ್ತಿರುವ ರವಿಯು ಕಿರಣಗಳು ಮಧ್ಯಾಹ್ನದ ಆತನ ಕಿರಣಗಳಷ್ಟು ಪ್ರಕಾಶಿಸಬಹುದೇ? ಅಶಕ್ಯ! ಅಮೋಘ ಚೈತನ್ಯ, ಆನಂದ ವೃತ್ತಿ, ಉಲ್ಲಾಸ, ಹಾಸ್ಯರಸ, ಸಾಹಸ, ವಿನಯ, ಗುಣ ಗ್ರಾಹಕತೆ, ಅಂತರ್ನಿಶ್ಚಯ ಇವುಗಳಿಂದೊಡಗೂಡಿದ ‘ಆ ತಾರುಣ್ಯವು’-‘ಯೌವನವು’ ಪುನಃ ದೊರಕುವದೇ?

ಮುದಿ ಎತ್ತು ತಾರುಣ್ಯದ ಭರದಲ್ಲಿದ್ದ ಹೋರಿಯನ್ನು ಸರಿಗಟ್ಟ ಬಹುದೇ?

ಅವಳೇಕೆ ಇಂಥ ಉಭಯ ಸಂಕಟದಲ್ಲಿ ಬಂದಿಳಿಯಬೇಕಿತ್ತು? ಅನುಚಿತ, ಕೃತ್ರಿಮ ರೀತಿಯಿಂದ ಆತನನ್ನೇಕೆ ಭ್ರಾಂತಿಗೊಳಿಸಬೇಕಿತ್ತು? ಇಂಥ ಸಂದುಕಟ್ಟಿನ ವೇಳೆಯಲ್ಲಿ, ತಾನು ಬಣ್ಣದ ಗೊಂಬೆಯೆಂದೂ ತಾರುಣ್ಯವು ಅನೇಕ ಸಂವತ್ಸರಗಳ ಹಿಂದ ಕಳೆದಿದೆಯೆಂದೂ ಹೇಳಲು ಆಕೆಗೆ ಹೇಗೆ ಧೈರ್ಯವಾದೀತು!

ಮಧ್ಯರಾತ್ರಿಯಾಗಿತ್ತು. ತಾರೆಯು ವಿಚಾರ ಮಗ್ನಳಾಗಿ ಮೇಜ ಗೊರಗಿ ಕೂತಿದ್ದಳು. ಎದುರಿನಲ್ಲಿ ವಿವಾಹದ ಉಡುಗರೆಗಳ ರಾಶಿಯೇ ಬಿದ್ದಿತ್ತು. ಅವುಗಳನ್ನು ಒಮ್ಮೆ ಕಣ್ಣೆತ್ತಿ ನೋಡಲೂ ಸಹ ಇಚ್ಛೆಯಿರಲಿಲ್ಲ. ಅದೇ ಸ್ವಲ್ಪ ದಿನಗಳ ಹಿಂದೆ ಅಂಥ ಆಭರಣಗಳಿಗಾಗಿ ಜೀವ ಬಿಡುತ್ತಿದ್ದಳು. ಅದೇಕೆ! ವಯಸ್ಸಿನ ಚಿಹ್ನೆಗಳನ್ನು ಮರೆಮಾಡಲು; ನೊಂದುತ್ತಿರುವ ತಾರುಣ್ಯದ ಜ್ವಾಲೆಯನ್ನು ಪೋಷಿಸಲು. ಆದರೆ ಇಂದು ಅವೆಲ್ಲ ವನ್ನೂ ತಿರಸ್ಕರಿಸುತ್ತಿದ್ದಳು. ಅನುರಾಗದಲ್ಲಿ ಸತ್ಯತೆಯಿದೆ. ಸತ್ಯವೂ ಅಸತ್ಯವೂ ಎಂದೂ ಕೂಡಲಾರವು.

'ಆ ಸ್ಥಳವನ್ನೇ ಬಿಟ್ಟು ಯಾರಿಗೂ ತನ್ನ ಪರಿಚಯವಿಲ್ಲದ ಯಾವ ದೊಂದು ಸ್ಥಳಕ್ಕೆ ಯಾಕೆ ಹೋಗಬಾರದು.' ಎಂದು ತನ್ನಷ್ಟಕ್ಕೆ ವಿಚಾರಿಸಿದಳು. ಕುಮಾರನ ವಿವಾಹವಾದ ನಂತರ ಬಂದು ಎಲ್ಲ ಸಂಗತಿಯನ್ನು ವಿಶದಪಡಿಸಿದರಾಯಿತು. ಇದು ಸಹಜವಾಗಿ ನೀಲಾಕಾಶದಿಂದೊಗೆದ ವಜ್ರಾಘಾತದಂತಾಗುವದು. ಕುಮಾರನ ಸ್ಥಿತಿಯೇನಾಗುವದೋ! ದೇವರೇ ಬಲ್ಲ. ಹೀಗೆ ಮಾಡದ ಹೊರತು ಗತ್ಯಂತರವಿಲ್ಲ. ಅವಳು ಮಾತ್ರ ದಿನ ಗಳನ್ನು ಶೋಕದಲ್ಲಿಯೂ ಕಷ್ಟದಲ್ಲಿಯೂ ಕಳೆಯಬೇಕಾಗುತ್ತಿತ್ತು. ತಾರೆಗೆ ತನ್ನ ಅವಸ್ಥೆಯ ಬಗ್ಗೆ ಚಿಂತೆಯಿರಲಿಲ್ಲ. ನಿಷ್ಫಲವಾಗಿಯೂ ಅತಿಯಾ ಗಿಯೂ ಮೋಹಿಸಿದ ಆತನನ್ನು ಮೋಸಪಡಿಸಲು ಮಾತ್ರ ಇಚ್ಛಿಸಲಿಲ್ಲ. ಅವಳಿಗೆ ಸ್ವರ್ಗೀಯ ಪ್ರೇಮದ ಜ್ಞಾಪಕವೇ ಸಾಕು. ಬ್ರಹ್ಮನು ಅವಳ ಹಣೆ ಯಲ್ಲಿ ಇಷ್ಟೇ ಬರೆದಿದ್ದನೇ? ವಿಧಿಲಿಖಿತ!

ಈ ವೇಳೆಗೆ ದಾಸಿಯು ಬಂದು "ಬಾಯೀಸಾಹೇಬ, ಮಧ್ಯರಾತ್ರಿಯು ಮೀರಿದೆ. ಇನ್ನೂ ಊಟಮಾಡಿಲ್ಲವಲ್ಲ. ಏಳಿರಿ, ಸ್ವಲ್ಪ......."

"ಬೇಡ ಹೋಗವ್ವಾ. ನನಗೆ ಹಸಿವೆಯಿಲ್ಲ. ನೀನು ಊಟಮಾಡು ಹೋಗು."

"ಬಾಯಿಸಾಹೇಬ, ನನ್ನನ್ನು ಮಾತ್ರ ಮರೆಯಬೇಡಿರಿ. ನಾನೂ ನಿಮ್ಮ ಜೊತೆಯಲ್ಲಿಯೇ ಬರುವವಳು."

"ಹೂಂ. ಹಾಗೇ ಮಾಡುವಿಯಂತೆ. ನಿನಗೆ ಹೊಸ ವಸ್ತ್ರಗಳು ಇವೆಯೇ?"

"ಹೊಸ ವಸ್ತ್ರಗಳನ್ನು ತೆಗೆದುಕೊಂಡು ನಾನೇನು ಮಾಡಲಿ. ನಿಮ್ಮ ಹಳೇ ವಸ್ತ್ರಗಳೇ ಸಾಕು."

ದಾಸಿಯು ಹೋದಳು. ತಾರೆಯು ಶೆಲ್ಫಿನ ಮೇಲಿನ ಗಡಿಯಾರದ ಕಡೆಗೆ ನೋಡಿದಳು. ಹನ್ನೆರಡು ಗಂಟೆ ಮೀರಿತ್ತು. ಸೂರ್ಯನುದಯಿಸಲು ಬರೇ ಆರೇ ತಾಸುಗಳು. ದೇವಾ! ಅನೇಕ ವರ್ಷಗಳಿಂದಲೂ ಅವಳು ಕಳೆದುಕೊಂಡ ತಿನ್ನಬಾರದ ಆ ಫಲವನ್ನೇಕೆ ಪುನಃ ದಯಪಾಲಿಸಿದಿ.

ತಾರೆಯು ಮನದಲ್ಲಿ ಏನೋ ನಿರ್ಧರಿಸಿದಳು. ಅಪೂರ್ವ ವಸ್ತ್ರಗಳನ್ನೂ ಬೆಲೆಯುಳ್ಳ ಆಭರಣಗಳನ್ನು ತೆಗೆದೊಗೆದು ಶ್ವೇತ ಪತ್ತಲವನ್ನು ಉಟ್ಟುಕೊಂಡಳು. ಸೋಪು ಬಿಸಿನೀರಿನಿಂದ ಮುಖ ತೊಳೆದುಕೊಂಡಳು. ಮುಕುರದಲ್ಲಿ ನೋಡಿದಳು. ಯಾವ ಕೃತ್ರಿಮ ಸೌಂದರ್ಯವು ಪ್ರೇಕ್ಷಕರನ್ನು ದಿಙ್ಮೂಢರನ್ನಾಗಿ ಮಾಡುತ್ತಿತ್ತೋ, ಅದೆಲ್ಲಿದೆ ಈಗ? ಮುಖಚಿನ್ಹಗಳೆಲ್ಲವೂ ಮುಂಚಿನವೇ; ಆದರೆ ಆ ಲಾವಣ್ಯವೆಲ್ಲಿದೆ? ಇನ್ನು ಆಕೆಯು ತರುಣಿಯಂತೆ ನಟಿಸಲಾರಳೇ?

ಈಗ ಮಾತ್ರ ತಾರೆಗೆ ಒಂದು ನಿಮಿಷ ಕಳೆಯಲು ಸಹ ಅಶಕ್ಯವೆನಿಸಿತು. ಮೇಜಿನ ಮೇಲೆ ನಿಷ್ಕಾಳಜಿಯಿಂದ ಹರಡಿದ ಅತಿಭೋಗದ ಬೆಲೆಯುಳ್ಳ ಆಭರಣಗಳು ಭಯಪ್ರದವಾಗಿ ತೋರಿದವು; ಅಸಹ್ಯವೇದನೆಯನ್ನುಂಟುಮಾಡಿದವು. ಕಪಟ, ಕೃತ್ರಿಮ, ಪ್ರಪಂಚವು ಬಹು ಬೇಸರವೆನಿಸಿತು. ವಿದ್ಯುದ್ದೀಪ, ವಿದ್ಯುದ್ವಾಯು ಯಂತ್ರ, ಹಂಸತೂಲಿಕಾತಲ್ಪ

ದಿಂದೊಡಗೂಡಿದ ಆ ಗೃಹವು, ತಾರೆಗೆ ದಘದಘಿಸುತ್ತಿರುವ ಸ್ಮಶಾನದಂತೆ ತೋರಿತು.

ಎಲ್ಲಿಗೆ ಹೋಗುವದು? ಇದೊಂದು ಮುಖ್ಯ ಪ್ರಶ್ನೆ. ಉಗಿಬಂಡಿಯಿಂದ ಹೋದರೆ ಸುರಕ್ಷಿತವಾಗಿ ಇವರ ಕಣ್ಣು ತಪ್ಪಿಸಲಾರಳು. ಮರುದಿನ ಕುಮಾರನು ಅಷ್ಟದಿಕ್ಕುಗಳಿಗೂ ಅವಳನ್ನು ಹುಡುಕಲು ತನ್ನ ಜನರನ್ನು ಕಳಿಸುವದು ನಿಶ್ಚಯ. ಒಂದು ವಿಚಾರವು ಹೊಳೆಯಿತು. ಯಾರಿಗೂ ತಿಳಿಯಲಶಕ್ಯವಾದ ಒಂದು ಹಾದಿಯನ್ನು ಹಿಡಿಯಲು ನಿಶ್ಚಯಿಸಿದಳು.

ತಾರೆಯ ಹೃದಯವು ವಸಂತ ಋತುವಿನ ಗಂಗಾನದಿಯಂತೆ ಸ್ವಾಭಿಮಾನ ತೃಪ್ತಿಯಿಂದ ತುಂಬಿ ತುಳುಕುತ್ತಿತ್ತು. ಆಕೆಗೆ ಸ್ವಲ್ಪವೂ ಕೆಡಕೆನಿಸಲಿಲ್ಲ. ಅಥವಾ ನಿರಾಶೆಯೂ ಆಗಿರಲಿಲ್ಲ. ತಾರೆಯು ಇಂದಲ್ಲ ನಾಳೆಯಾದರೂ ಕುಮಾರನೆಡೆಗೆ ಬರುವವಳೇ. ಆಗ ಅದು ಮರಹಂಭಾವದ ಕಳಂಕದಿಂದೊರಸಲ್ಪಟ್ಟ ಭೆಟ್ಟಿ. ಈಗ ತಾರೆಯು 'ನಿರ್ಮಲ ಪ್ರೇಮವು' ತೋರಿಸಿದ ದಾರಿಯನ್ನು ತುಳಿಯುತ್ತಿದ್ದಾಳೆ. ಅಂದ ಮೇಲೆ ನಿರಾಶೆ ಪಡಲು ಕಾರಣವೇನು?

ತಾರೆಯ ಹೃದಯದಲ್ಲಿ ಒಮ್ಮಿಂದೊಮ್ಮೆ ಒಂದು ವಿಚಾರವು ಝುಗ್ಗೆಂದಿತು. 'ಕುಮಾರನು ನನ್ನನ್ನು ಹುಡುಕಿಸಿ ನಿರಾಶನಾಗಿ ಅವಿಚಾರದಿಂದ ಆತ್ಮಹತ್ಯಮಾಡಿಕೊಂಡರೆ!' ಅಂಥ ಸಂಭವದ ಬರೇ ವಿಚಾರವು ಅವಳ ಕೋಮಲ ಹೃದಯುವನ್ನು ಚುಚ್ಚಹತ್ತಿತು. ಪಾಪ! ಕೆಲಹೊತ್ತು ವಿಚಾರ ಸೂಚಿಸಿದೆ ಸುಮ್ಮನೆ ನಿತ್ತಳು.

ಕಡೆಗೊಂದು ಪತ್ರ ಬರೆಯುಹತ್ತಿದಳು.

ಮನೋಹರಾ,

ಕ್ಷಮಿಸಿರಿ. ನಾನು ನಿಮಗೆ ಯೋಗ್ಯಳಲ್ಲ. ನಿಮ್ಮನ್ನು ಪಡೆಯಲು ನಾನು ಅರ್ಹಳಲ್ಲ. ಜನ್ಮಪರ್ಯಂತರ ಅನುಭವಿಸಲು ಸಿಗಲಾರದೆಂದು ತಿಳಿದ 'ಸ್ವರ್ಗೀಯ ಪ್ರೇಮದ' ಬಿಂಬವನ್ನು ತೋರಿಸಿದಿರಿ. ಸಾಕು. ಇನ್ನೇನು ಬೇಕು? ಇಷ್ಟರಿಂದಲೇ ತೃಪ್ತಿಪಡುವೆನು. ಕಡೆಯುವರೆಗೆ ನೀವು ನನ್ನನ್ನು ಪ್ರೀತಿಸುತ್ತಿದ್ದಿರಿ ಎಂಬ ಸ್ಮರಣೆಯಿಂದಲೇ ಸಮಾಧಾನ ಹೊಂದುವೆನು. ಪ್ರೇಮದ ಜ್ಞಾಪಕ

ದಲ್ಲಿರುವದೇ ಹೆಚ್ಚು ಸೌಖ್ಯವೆನಿಸುತ್ತದೆ. ಒಂದಿಲ್ಲೊಂದು ದಿನ ತಿರುಗಿ ಬರುವೆನು. ಅವಾಗೆಂದಿರಿ? ನಿಮ್ಮ ವಿವಾಹವಾದ ನಂತರ. ನನ್ನ ಪುನರಾಗಮನವನ್ನು ಇಚ್ಛಿಸುತ್ತಿದ್ದರೆ ಇದೊಂದು ನನ್ನ ಶರ್ತ. ನನ್ನ ಮೇಲೆ ಸಿಟ್ಟಾಗಬೇಡಿರಿ. ಪ್ರಿಯಕರಾ! ತಾವು ನನಗೆ ಕೊಟ್ಟ ಆಭರಣಗಳನ್ನು ನಿಮ್ಮ ನವವಧುವಿಗೆ ನನ್ನ ವತಿಯಿಂದ ಉಡುಗರೆಯಾಗಿ ಅರ್ಪಿಸಿರಿ. ಅವೆಲ್ಲವನ್ನೂ ಇಲ್ಲಿಯೇ ಇಟ್ಟಿದ್ದೇನೆ. ನಿಮ್ಮ ಪ್ರೇಮದ ಪ್ರಥಮ ಉಚಿತವನ್ನು—ಆ ಮುತ್ತಿನ ಹಾರವನ್ನು- ಮಾತ್ರ ತೆಗೆದುಕೊಂಡು ಹೋಗುತ್ತೇನೆ. ನನ್ನನ್ನು ಹುಡುಕಿಸಬೇಡಿರಿ. ಕೈಮುಗಿದು ಬೇಡುತ್ತೇನೆ.

ಆಜನ್ಮ ತಮ್ಮವಳಾದ
**ತಾರೆ.**

ಆ ಸಂದೇಶವನ್ನು ಮುಗಿಸಿ, ಅಂದವಾಗಿ ಮಡಚಿ ಮೇಜಿನ ಮೇಲಿಟ್ಟಳು. ಕತ್ತಿಗೆ ಮುತ್ತಿನ ಹಾರವನ್ನು ಹಾಕಿಕೊಂಡು ಕೋಣೆಯಿಂದ ಹೊರಬಿದ್ದಳು. ನಾಟಕಗೃಹದ ಸಂಗೀತ ಶಾಲೆಯಿಂದ ತಂತು ವಾದ್ಯವು ಕೇಳಿಸುತ್ತಿತ್ತು. ಕ್ಷಣಕಾಲ ಅವಳ ಕೈಕಾಲುಗಳು ಏಳಲಿಲ್ಲ. ಇಡೀ ಹದಿನೈದು ವರ್ಷದ ಅವಳ ಸಂಬಂಧವನ್ನು ಅವಳು ಅಂದು ಕಡಿದುಹಾಕಬೇಕಿತ್ತು. ಅತಿ ಖಿನ್ನತೆಯು ಅವಳನ್ನು ಜರ್ಜರ ಮಾಡಿತು. ಆಗ ಕಂಪೆನಿಯ ಮಾಲಕನು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದಳು. ಅವಳ ಹೃದಯವು ಒತ್ತರದಿಂದ ಹಾರಲಾರಂಭಿಸಿತು. ಕೆಲವು ನಿಮಿಷ ಗೋಡೆಯ ಮರೆಯಲ್ಲಿ ನಿಶ್ಚಲಳಾಗಿ ನಿತ್ತಳು. ಅವನು ಕಣ್ಮರೆಯಾಗುತ್ತಲೇ ಆ ಭವ್ಯ ಮಂದಿರದಿಂದ ಹೊರಬಿದ್ದು ಸಣ್ಣ ದೊಡ್ಡ ಬೀದಿಗಳನ್ನು ದಾಟುತ್ತ ಗಂಗಾ ನದಿಯ ಸರಳ ಮಾರ್ಗವನ್ನು ಹಿಡಿದಳು.

ಗಂಗೆಯ ದಡದಲ್ಲಿ ಎಲ್ಲೆಲ್ಲಿಯೂ ಸ್ತಬ್ಧತೆಯು ನೆಲೆಗೊಂಡಿತ್ತು. ಅಲ್ಲಲ್ಲಿ ಬಡ ಭಿಕ್ಷುಗಳು ಮೈಮುದುಡಿಕೊಂಡು ಬೆಂಕಿಯೆದುರಿಗೆ ಕೂಡಿದ್ದರು. ಯಾತ್ರಿಕರು ನದಿಯ ಪಾವಟಿಗೆಗಳ ಮೇಲೆ ಸುಖನಿದ್ರೆ ಗೈಯ್ಯುತ್ತಿದ್ದರು. ಭಯಂಕರ ಶ್ವೇತ ಸರ್ಪದಂತೆ ತೋರ್ವ ಗಂಗೆಯು ಮಂಜುಳ

ಧ್ವನಿ ಮಾಡುತ್ತ ನಿಧಾನವಾಗಿ ಹರಿಯತ್ತಿದ್ದಳು. ಸಮೀಪದಲ್ಲಿ ನಾವೆಯೊಂದು ಕಟ್ಟಲ್ಪಟ್ಟಿದ್ದಿತು. ಅಂಬಿಗನು ನಾವೆಯಲ್ಲಿ ತೂಕಡಿಸುತ್ತ ಕೂತಿದ್ದನು.

"ಯಾರಪ್ಪಾ ನೀನು. ನನ್ನನ್ನು ಆಚೆಯ ದಡಕ್ಕೆ ದಾಟಿಸುವೆಯಾ?"

"ಇಲ್ಲಮ್ಮಾ ಆಗದು ಇಂಥಾ ಅಪರಾತ್ರಿಯಲ್ಲ."

ಆದರೆ ತಾರೆಯು ಹೆಚ್ಚು ಹಣ ಕೊಡಲೊಪ್ಪಿದ್ದರಿಂದ ಅಂಬಿಗನು ನಾವೆಯ ಹಗ್ಗವನ್ನುಜ್ಜಿ ಕೈಯಲ್ಲಿ ಹುಟ್ಟು ಹಿಡಿದುಕೊಂಡು ನೀವೆಲ್ಲಿಗೆ ಹೋಗಬೇಕಮ್ಮಾ?" ಎಂದನು.

"ಆಚೆಯ ದಡದಲ್ಲಿದ್ದ ಹಳ್ಳಿಗೆ" ಎಂದಳು.

"ಇಂಥ ವೇಳೆಯಲ್ಲ ಪ್ರವಾಸಿಕರು ಸಿಗುವದಿಲ್ಲ."

"ಇರಲಿ, ನನ್ನನ್ನು ಮುಂಚೆ ದಾಟಿಸು."

ತಾರೆಯು ನಾವೆಯಲ್ಲಿ ಕುಳಿತಳು. ನಾವಿಕನು ಪ್ರವಾಹದ ಕಡೆಗೆ ಹುಟ್ಟು ಹಾಕಹತ್ತಿದನು. ವಿಸ್ತಾರವಾದ ಜಲಸಮುದಾಯದಲ್ಲಿ, ಆ ನಾವೆಯು ಸ್ವಪ್ನ ಸೃಷ್ಟಿಯ ಒಂದು "ಶಕ್ತಿ"ಯಂತೆ ತೋರಿತು.

ವೃಕ್ಷಗಳ ಸಂದಿನಿಂದೇಳುತ್ತಿದ್ದ, ಏಕಾದಶೀ ಚಂದ್ರಮನು ಆ ವಿಸ್ತಾರವಾದ ನೀಲಾಕಾಶದಲ್ಲಿ "ಗಂಗೆಯೊಳಗಿನ ನಾವೆ"ಯಂತೆ ಶೋಭಿಸಿದನು.

———o o o———

# ಬುಕ್ ಬೈಂಡರ್

·ಬರೆದವ: ಬಿ. ಶಂಕರ ಭಟ್ಟ

ಮಂಗಳೂರನ್ನು ನೋಡಿದವರಿಗೆ ಹಂಪನಕಟ್ಟೆಯ ಕೋಲಾಹಲವನ್ನು ಹೇಳುವ ಅಗತ್ಯವಿಲ್ಲ. ನೋಡದವರು ಆ ಗಲಾಟೆಯನ್ನೂಹಿಸಿದರೆ ಸಾಕು. ಹಂಪನಕಟ್ಟೆಯ ಪಡು ಬದಿಯಲ್ಲಿ ಅಪ್ಪಣ್ಣನ ಸ್ಮಾರಕವೋ ಎಂಬಂತೆ ಕಂಗೊಳಿಸುವ ಹುಲ್ಲಿನ ಮಾಡಿನ ಕಾಫಿ ಹೋಟೆಲಿನ ಎಡ ಬದಿಯಲ್ಲೊಂದು ಸಣ್ಣ ಅಂಗಡಿ. ಅದರಲ್ಲೊಬ್ಬ ಬುಕ್ ಬೈಂಡರ್. ಅವನ ಹೆಸರು ಚಾರ್ಲಿ. ಪ್ರಾಯ ಸುಮಾರು ೩೦ ವರ್ಷ.

ಚಾರ್ಲಿಯು ಬೆಳಗಿನಿಂದ ಸಂಜೆಯ ವರೆಗೆ, ಆ ಮೇಲೆ ದೀಪ ಹಚ್ಚಿ ಮಧ್ಯ ರಾತ್ರಿಯವರೆಗೆ, ತನ್ನ ಮಸುಕಾದ ಕೋಣೆಯೊಳಗೆ ಒಂದು ಹರಕು ಚಾಪೆಯ ಮೇಲೆ ಕುಳಿತುಕೊಂಡು ಬೈಂಡಿನ ಕೆಲಸ ಮಾಡುತ್ತಿದ್ದನು.

ಒಮ್ಮೆ ಕೆಂಪು, ನೀಲಿ, ಹಳದಿ ಕಾಗದಗಳನ್ನು ಕತ್ತರಿಸುವನು. ಒಮ್ಮೆ ಬೆರಳನ್ನು ಬಾಯಿಗೆ ಹಾಕಿ ಪುಸ್ತಕದ ಕಾಗದಗಳನ್ನು ಆಚೆ ಈಚೆ ಮಗುಚಿ ಸರಿ ಮಾಡುವನು. ಮತ್ತೊಮ್ಮೆ ಪುಸ್ತಕಗಳನ್ನು ಹೊಲಿಯುವನು. ಮಗುದೊಮ್ಮೆ ಸುತ್ತಿಗೆಯಿಂದ ಹೊಡೆದು ಅಂಟು ತಾಗಿಸಿ ಕಾಗದಗಳನ್ನು ಅಂಟಿಸುವನು. ಪುಸ್ತಕ ತಯಾರಿಸುವನು.

ಇದೇ ರೀತಿ ಒಂದು ಪುಸ್ತಕದ ಕೆಲಸವಾದ ಮೇಲೆ ಇನ್ನೊಂದು ಪುಸ್ತಕದ ಕೆಲಸ ಮಾಡುವನು. ಒಂದು ಕ್ಷಣವಾದರೂ ಆತನಿಗೆ ವಿಶ್ರಾಂತಿ ಬೇಕಾಗುತ್ತಿರಲಿಲ್ಲ. ಬಣ್ಣದಿಂದ ಮಲಿನವಾದ ಕೈ ಬೆರಳುಗಳು ಒಂದೇ ರೀತಿಯಿಂದ ಕೆಲಸ ಮಾಡುತ್ತಿದ್ದುವು. ಆತನ ಬೆಕ್ಕಿನ ಕಣ್ಣುಗಳು ಕೆಲಸದಲ್ಲೇ ಮಗ್ನವಾಗಿದ್ದುವು.

ಬೆಳಗಾದರೆ ಸರಿ, ಮಾರ್ಗದಲ್ಲಿ ಜನರು ಹೋಗಿ ಬರುವ ಗಲಾಟೆಗಾರಂಭವಾಗುತ್ತದೆ. ಗಾಡಿಗಳ ಮೋಟಾರುಗಳ ಓಡಾಟಕ್ಕೆ ಬಿಡುವೇ

ಇಲ್ಲ. ಮೆರವಣಿಗೆಗಳು, ದಿಬ್ಬಣಗಳು ಹೋಗದ ದಿನವಿಲ್ಲ. ಇಷ್ಟೆಲ್ಲಾ ಗಲಾಟೆ ಹೊರಗೆ ನಡೆಯುತ್ತಿದ್ದರೂ ಬೈಂಡರನು ಸಂಸಾರದ ಈ ಕೋಲಾಹಲದಿಂದ ಬಹಳ ದೂರ-ತನ್ನ ಕಾಗದಗಳ, ಪುಸ್ತಕಗಳ ಲೋಕದಲ್ಲೇ ವ್ಯಕ್ತನಾಗಿರುವನು. ಹೊರಗಿನ ಸಂಗತಿಯೇ ಅವನಿಗೆ ಗೊತ್ತಿಲ್ಲ. ಅವನ ಸ್ವಭಾವವು ಬಹಳ ತೀಕ್ಷ್ಣವಾಗಿತ್ತು. ಸಮಾಧಾನದ ಮಾತುಗಳೇನೆಂಬುದನ್ನು ಆತನು ಅರಿಯದವನು ಗ್ರಾಹಕರಿಗೆ ಒಮ್ಮೆ ಒಂದು ಬೆಲೆಯನ್ನು ಹೇಳಿದರೆ ಏನೇ ಆಗಲಿ, ಮತ್ತೆ ಆ ಮಾತನ್ನು ಬದಲಿಸುವುದೆಂದರೇನೆಂದು ಆತನು ಅರಿಯನು.

ಗ್ರಾಹಕರು ಅವನು ಹೇಳಿದ ಮಜೂರಿ ಕೊಟ್ಟು ಪುಸ್ತಕದ ಬೈಂಡು ಒಳ್ಳೆಯದಾಗಬೇಕೆಂದು ಹೇಳಿದರೆ, ಆಗ ಅವನು 'ಸ್ವಾಮಿ! ನನಗೆ ತಿಳಿದಷ್ಟು ಮಟ್ಟಿಗೆ ಮಾಡುವೆನು; ತಮಗೆ ಮನಸ್ಸಿದ್ದರೆ ಪುಸ್ತಕವನ್ನಿಲ್ಲಿ ಹಾಕಿ ಹೋಗಿರಿ; ಇಲ್ಲದಿದ್ದರೆ ಬೇಗನೆ ಕೊಂಡುಹೋಗಿರಿ' ಎನ್ನುವನು.

ಚಾರ್ಲಿಯು ಇಷ್ಟು ನಿಷ್ಠುರತೆಯಿಂದ ಮಾತಾಡಿದರೂ ಜನರು ಅವನಲ್ಲೇ ಪುಸ್ತಕಗಳನ್ನು ಕೊಡುತ್ತಿದ್ದರು. ಅವನಷ್ಟು ಚಂದವಾಗಿಯೂ ಗಟ್ಟಿಯಾಗಿಯೂ ಬೈಂಡು ಮಾಡುವವರು ಮಂಗಳೂರಲ್ಲಿರಲಿಲ್ಲ. ಪುಸ್ತಕಗಳಿಗೆ ಬೈಂಡು ಮಾಡುವುದೇ ಆತನ ವಿರಕ್ತ ಜೀವನದ ಏಕಮಾತ್ರ ಸತ್ಯವಾಗಿತ್ತು. ಸತ್ಯವೇ ಸುಂದರವಷ್ಟೆ?

೨

ಒಂದು ದಿನ ಬೆಳಗ್ಗೆ ಬೈಂಡರನು ತನ್ನ ಅಂಗಡಿಯಲ್ಲಿ ಕುಳಿತುಕೊಂಡು ಬೈಂಡಿನ ಕೆಲಸ ಮಾಡುತ್ತಿದ್ದಾಗ ಒಬ್ಬ ಬಡ ಹೆಂಗಸು ತನ್ನ ೫-೬ ವರ್ಷದ ಮಗನೊಂದಿಗೆ ಅಲ್ಲಿಗೆ ಬಂದು ಬೈಂಡರನೊಡನೆ 'ಅಣ್ಣಾ ನನ್ನ ಮಗುವಿನ ಈ ಹರಿದ ಪುಸ್ತಕಕ್ಕೆ ದಯಮಾಡಿ ಬೈಂಡು ಹಾಕಿ ಕೊಡಲಾರೆಯಾ?' ಎಂದು ದೈನ್ಯದಿಂದ ಕೇಳಿದಳು. ಬೈಂಡರನು ತಲೆ ಎತ್ತಿ ಆಕೆಯ ಕಡೆಗೊಮ್ಮೆ ನೋಡಿದನು. ಆಕೆಯ ಚಿಂತಾತುರ ಮುಖವು ಆತನನ್ನು ಪ್ರಭಾವಿಸಲಿಲ್ಲ. ಅವನು ಪುಸ್ತಕವನ್ನು ಆಕೆಯಿಂದ ಇಸು

ಕೊಂಡು ಆಚೆ ಈಚೆ ಬಿಡಿಸಿ ನೋಡಿ ಗಣ್ಯವಿಲ್ಲವೆ 'ಇದಕ್ಕೆ ನಾಲ್ಕಾಣೆ ಚಾರ್ಜು' ಎಂದನು

ಅಷ್ಟು ಹೇಳಿ ತನ್ನ ಕೆಲಸದಲ್ಲಿ ತೊಡಗಿದನು. ಚಿಂದಿ ವಸ್ತ್ರಗಳನ್ನುಟ್ಟ ಆ ದರಿದ್ರ ಮೂರ್ತಿಯು ಕಣ್ಣು ಬಿಟ್ಟು ಬೈಂಡರನ ಕರ್ಕಶವಾದ ಮೋರೆಯನ್ನು ನೋಡುತ್ತಾ ಚಿಂತಿಸತೊಡಗಿತು. ನಾಲ್ಕಾಣೆ! ಎಕ್‌ದಂ ಹನ್ನೆರಡು ದುಡ್ಡು!

ಆದರೆ ಆ ಹೆಂಗಸಿನ ಕೈಯಲ್ಲಿ ಒಂದು ಕುರುಡು ಕಾಸು ಕೂಡ ಇದ್ದಿಲ್ಲ. ಎಂದಮೇಲೆ ಆಕೆಯು ಪುಸ್ತಕಕ್ಕೆ ಬೈಂಡು ಹಾಕಿಸುವುದಾದರೂ ಹೇಗೆ? ಆದರೆ ಹಟಮಾರಿ ಹುಡುಗನು ಕೇಳುವಂತಿಲ್ಲ. ದುಃಖಿತಳಾದ ಆಕೆಯು 'ಅಣ್ಣಾ! ನಾಲ್ಕಾಣೆ ಎಂದರೆ ಬಹಳ ಹೆಚ್ಚಾಯಿತು' ಎಂದು ನಿಟ್ಟುಸಿರು ಗರೆದಳು.

ಬೈಂಡರನು ಗುಣುಗುಟ್ಟಿದನು.

ಅವನ ಮಾತಿಗೆ ಎದುರಾಡುವವಳಿವಳಾರು? ಇಂದಿನ ವರೆಗೆ ಆತನು ಹೇಳಿದ ಮಜೂರಿಗೆ ವ್ಯತಿರಿಕ್ತವಾಗಿ ಮಾತಾಡಿದವರಿಲ್ಲ. ಯಾವಾಗಲೂ ಅವನು ಹೇಳಿದ ಮಜೂರಿ ದೊರೆಯುತ್ತಲೇ ಇತ್ತು. ಇಂದು?

'ನಾಲ್ಕಾಣೆಗಿಂತ ಒಂದು ಕಾಸು ಕಡಮೆಯಾದರೆ ಸಾಧ್ಯವಿಲ್ಲ' ಎಂದು ತನ್ನ ಸ್ವಾಭಾವಿಕ ಕಟುತೆಯನ್ನು ಆಕೆಗೂ ತೋರಿಸಿದನು.

ಮತ್ತೆ ಮೊದಲಿನಂತೆಯೇ ಗೋಂದು ತೆಗೆದುಕೊಂಡು ಕಾಗದಗಳನ್ನಂಟಿಸುತ್ತಾ ತನ್ನ ಕೆಲಸದಲ್ಲಿ ತೊಡಗಿದನು.

ಸ್ತ್ರೀಯು ನಿಸ್ಸಹಾಯಳಾಗಿ ಅಲ್ಲೇ ನಿಂತು ಒಮ್ಮೆ ಇವನ ಸಿಡುಕು ಮೋರೆಯನ್ನು ನೋಡುವಳು. ಮತ್ತೊಮ್ಮೆ ಧೂಳು ತುಂಬಿದ ಅಂಗಡಿಯ ಕಡೆ ಕಣ್ಣಿಡುವಳು. ಇನ್ನೊಮ್ಮೆ ಮಾರ್ಗದ ಮೇಲೆ ಓಡಾಡುವ ಗಾಡಿ, ಮೋಟಾರುಗಳ ಕಡೆಗೆ ದೃಷ್ಟಿ ಹಾಕುವಳು. ಇಷ್ಟೆ ಅವಳ ಕೆಲಸ.

ಸ್ವಲ್ಪ ಹೊತ್ತು ಹಾಗೆ ನಿಂತು ಆ ಹೆಂಗಸು ತುಸು ಧೈರ್ಯ ಮಾಡಿ 'ಅಣ್ಣಾ, ನನ್ನ ಹತ್ತಿರ ನಾಲ್ಕಾಣೆಗೀಣೆ ಇಲ್ಲ. ನಾಲ್ಕು ದುಡ್ಡು ಉಂಟು.

ನೀನು ನನ್ನ ಮುದ್ದು ಮಗನ ಪುಸ್ತಕಕ್ಕೆ ಬೈಂಡು ಮಾಡಿ ಕೊಟ್ಟ ರಾದೀತು' ಎಂದು ಮತ್ತಷ್ಟು ದೀನತೆಯನ್ನು ತೋರಿಸಿದಳು.

ಬೈಂಡರನು ಕಿಡಿಕಿಡಿಯಾದನು. 'ದುಡ್ಡಿಲ್ಲದವಳಿಗೆ ಇಲ್ಲಿ ಕೆಲಸ ವೇನು? ನಡೆ ಇಲ್ಲಿಂದ. ಕೆಲಸಕ್ಕೆ ಅಡ್ಡಿ ಮಾಡಬೇಡ. ದಿನವಿಡೀ ನಿನ್ನೊ ಡನೆ ತಲೆ ಬಡೆದುಕೊಳ್ಳಲಿಕ್ಕೆ ನನಗೆ ಸಮಯವಿಲ್ಲ' ಎಂದು ಗರ್ಜಿಸಿದನು.

ಮತ್ತೊಮ್ಮೆ ಆಕೆಯ ಕಡೆಗೆ ತನ್ನ ತೀಕ್ಷ್ಣ ದೃಷ್ಟಿಯನ್ನು ಬೀರಿ ಮುಳ್ಳು ಮುತ್ತುಗದ ಮರದ ಬೇತಾಳನಂತೆ ತನ್ನ ಕೆಲಸದಲ್ಲಿ ತೊಡಗಿದನು.

ಸ್ತ್ರೀಯು ಹಿಂದಿರುಗಲಿಲ್ಲ. ಆಕೆಯ ಮಗನು ಇದನ್ನೆಲ್ಲಾ ಗಾಬರಿ ಯಿಂದ ನೋಡುತ್ತಾ ನಿಂತನು. ಸ್ವಲ್ಪ ಹೊತ್ತು ಕಳೆದ ಮೇಲೆ ಸ್ತ್ರೀಯು 'ಅಣ್ಣಾ! ಒಂದು ವೇಳೆ ನನ್ನ ಕೈಯಲ್ಲಿ ದುಡ್ಡಿರುತ್ತಿದ್ದರೂ ನಾನದನ್ನು ನಿನಗೆ ಕೊಡುತ್ತಿರಲಿಲ್ಲ. ಏಕೆಂದರೆ ನನ್ನ ಮತ್ತು ಮಗನ ಹಸಿವಡಗ ಬೇಕಾದರೆ ದುಡ್ಡಿನ ಅವಶ್ಯಕತೆ ಇದೆ. ನೀನು ನನ್ನ ಮಗನ ಪುಸ್ತಕಕ್ಕೆ ಬೈಂಡು ಹಾಕಿ ಕೊಟ್ಟರೆ ಅದಕ್ಕೆ ಪ್ರತಿಯಾಗಿ ನಿನ್ನ ಅಂಗಡಿಯ ಧೂಳ ನ್ನೆಲ್ಲಾ ಸರಿಯಾಗಿ ಗುಡಿಸಿ ಸೆಗಣಿ ಸಾರಿಸಿ ಒಮ್ಮೆ ಶುಚಿ ಮಾಡಿ ಕೊಡ ಬಲ್ಲೆನು. ದಯಮಾಡು' ಎಂದಳು.

ಬೈಂಡರನು ಈಗ ಇಕ್ಕಟ್ಟಿನಲ್ಲಿ ಬಿದ್ದನು. ಆತನ ಬೈಂಡರ್ ಜೀವನ ದಲ್ಲಿ ಇಷ್ಟರವರೆಗೂ ಇಷ್ಟು ಬಡ ಗ್ರಾಹಕರು ಒಮ್ಮೆಯೂ ಆತನ ಸಮೀಪಕ್ಕೆ ಬಂದಿರಲಿಲ್ಲ. ಥಕ್ಕನೆ ಉತ್ತರ ಕೊಡಲಾರದಾದನು. ಕೈಯಲ್ಲಿದ್ದ ಕತ್ತರಿಯನ್ನು ಚಾಪೆಯ ಮೇಲಿಟ್ಟು ಒಂದು ಕ್ಷಣದ ವರೆಗೆ ಕಣ್ಣು ಬಿಟ್ಟು ಆ ಹೆಂಗಸನ್ನೇ ನೋಡಿದನು.

ಈ ಸಲ ಬೈಂಡರನ ಕಣ್ಣಿಗೆ ಆ ಬಡ ಹೆಂಗಸಿನ ಹರಕು ಚಿಂದಿಯೂ ಎಣ್ಣೆ ಕಾಣದೆ ಒಣ ಹುಲ್ಲಿನಂತಾದ ಕೂದಲುಗಳೂ ಗುಳಿ ಬಿದ್ದ ಕಣ್ಣು ಗಳೂ ಸರಿಯಾಗಿ ಕಂಡುವು. ಮತ್ತು ಹರಕು ಅಂಗಿ ಹಾಕಿದ ಆ ಕೋಮಲ ಬಾಲಕನ ಮುಖವನ್ನು ನೋಡಿದ ಕೂಡಲೇ ಬೈಂಡರನ ಹೃದಯವು ಮೊದಲನೇ ಬಾರಿ ಕರುಣೆಯಿಂದ ಕರಗಿತು. ಬೈಂಡರನು ತನ್ನ ಆಂತರಿಕ ವನ್ನು ಮುಚ್ಚಿಟ್ಟು—'ಒಳ್ಳೇದು, ಪುಸ್ತಕವನ್ನಿಲ್ಲಿ ಕೊಡು. ನಾಳೆ ಬೈಂಡು

ಮಾಡಿ ಕೊಡುತ್ತೇನೆ. ನೀನು ನನಗೇನು ಪ್ರತಿಫಲ ಕೊಡುವ ಆವಶ್ಯಕ ವಿಲ್ಲ' ಎಂದು ಆ ಮಗುವಿನ ಕೈಯಿಂದ ಪುಸ್ತಕವನ್ನಿಸುಕೊಂಡು ತನ್ನ ಕೆಲಸದಲ್ಲಿ ಮಗ್ನನಾದನು.

ಹೆಂಗಸು ತನ್ನ ಮಗನೊಂದಿಗೆ ಸಂತೋಷದಿಂದ ತನ್ನ ಬಿಡಾರದ ಕಡೆಗೆ ಹೊರಟಳು. ಬೈಂಡರನು ಆ ದಿನ ದಾರಿಯಲ್ಲಿ ಬಂದು ಹೋಗುತ್ತಿರುವ ಜನರನ್ನೇ ನೋಡುತ್ತಾ ಕುಳಿತನು.

೩

ಮರುದಿನ ಹೆಂಗಸು ಪುಸ್ತಕ ಕೊಂಡುಹೋಗಲಿಕ್ಕೆ ಬಂದಾಗ ಬೈಂಡರನು ಎಂದಿನಂತೆ ಬೈಂಡಿನ ಕೆಲಸ ಮಾಡುತ್ತಿರದೆ ಆ ಹೆಂಗಸಿನ ದಾರಿ ನೋಡುತ್ತಿದ್ದನು.

ಸಮೀಪಕ್ಕೆ ಬಂದ ಕೂಡಲೇ ಬೈಂಡರನು ಪುಸ್ತಕವನ್ನು ತೆಗೆದು ಮಗುವಿನ ಕೈಯ್ಯಲ್ಲಿತ್ತನು. ಮಗುವು ಪುಸ್ತಕವನ್ನು ಸಂತೋಷದಿಂದ ತೆಗೆದುಕೊಂಡು ನಲಿದಾಡುತ್ತಾ ತನ್ನ ತಾಯೊಂದಿಗೆ—'ಅಮ್ಮಾ, ಎಷ್ಟು ಚಂದವಾಗಿದೆ ಈ ಪುಸ್ತಕ! ಜೋವಿನ ಪುಸ್ತಕವು ಇಷ್ಟು ಚಂದವಾಗಿಲ್ಲ' ಎಂದಿತು.

ತಾಯಿಯು ಮಗನ ಸಂತೋಷದಲ್ಲಿ ತಾನೂ ಭಾಗಿಯಾಗಿ ಬೈಂಡರನ ಹತ್ತಿರ—'ಅಣ್ಣಾ, ದೇವರು ನಿನಗೆ ಒಳ್ಳೇದು ಮಾಡಲಿ' ಎಂದು ತನ್ನ ತೃಪ್ತಿಯನ್ನು ಸೂಚಿಸಿದಳು.

ಆದರೆ ಬೈಂಡರನ ಧ್ಯಾನವು ಆ ಕಡೆಗಿರಲಿಲ್ಲ. ಅವನು ಆ ಹೆಂಗಸು ಉಟ್ಟ ವಸ್ತ್ರದಲ್ಲಿದ್ದ ತೇಪೆಗಳನ್ನೆಣಿಸುತ್ತಿದ್ದನು. ಮತ್ತು ಸಂತೋಷದಿಂದ ಅರಳಿದ ಆ ಬಡ ಬಾಲಕನ ವಿಷಯವಾಗಿ ಯೋಚಿಸತೊಡಗಿದನು. ಅವರ ಬಡತನದ ಚಿತ್ರ ಅವನ ಕಣ್ಣ ಮುಂದೆ ಕಟ್ಟಿದಂತಾಯಿತು.

'ಹೋಗುತ್ತೇನೆ' ಎಂದು ಹೇಳಿ ಹೆಂಗಸು ಹೋಗಲು ಹೊರಟಾಗ ಆ ನೀರಸ ಕಠೋರನಾದ ಬೈಂಡರನು ವಿಕಲನಾದನು. 'ಸ್ವಲ್ಪ ನಿಲ್ಲು' ಎಂಬ ಮಾತು ಆತನ ಬಾಯಿಂದ ಹೊರಟಿತು. ಹೆಂಗಸು ನಿಂತುಬಿಟ್ಟಳು.

'ನೀನು ಎಲ್ಲಿ ಇರುವುದು?'

'ಇದೇ ಬೀದಿಯಲ್ಲಿ ಗಣಪತಿ ದೇವಸ್ಥಾನಕ್ಕೆ ತಿರುಗುವಲ್ಲಿ.'

'ನಿನ್ನ ಯಜಮಾನರಿಗೇನು ಕೆಲಸ?' ಬಳಹ ಉತ್ಸುಕತೆಯಿಂದ ಕೇಳಿದನು.

'ನನ್ನ ಯಜಮಾನರು ಈ ಲೋಕವನ್ನು ಬಿಟ್ಟು ಸುಮಾರು ನಾಲ್ಕು ವರ್ಷಗಳಾದುವು.'

'ಹಾಗಾದರೆ ನಿನ್ನ ಜೀವನ ನಿರ್ವಾಹವು ಹೇಗೆ ನಡೆಯುತ್ತದೆ? ಮೂರನೆ ಪ್ರಶ್ನೆ.

'ನನಗೆ ರವಕೆ ಕಣಗಳಿಗೆ ಜರಿ ಹಾಕಲಿಕ್ಕೂ, ಎಲ್ಲ ವಸ್ತ್ರಗಳಿಗೆ ಹೂ ಬಿಡಿಸಲಿಕ್ಕೂ ಬರುತ್ತದೆ. ಸಣ್ಣ ಮಕ್ಕಳಿಗೆ ಬೇಕಾದ ಅಂಗಿ ಮೊದಲಾದುವನ್ನು ಹೊಲಿಯಲಿಕ್ಕೆ ಗೊತ್ತುಂಟು. ಈ ಕೆಲಸದಿಂದ ಏನಾದರೂ ಸಿಕ್ಕಿದರೆ ಅದರಿಂದ ಈ ಕಷ್ಟದ ಸಂಸಾರವನ್ನು ಸಾಗಿಸುತ್ತೇನೆ. ಇತ್ತೀಚೆಗೆ ಕೆಲಸ ಕಡಿಮೆಯಾದುದರಿಂದ ಸಂಪಾದನೆಯು ಬಿದ್ದು ಹೋಗಿ ಜೀವನವು ಕಷ್ಟವಾಗಿದೆ. ಇನ್ನು ಬೇರೆ ಕೆಲಸವನ್ನೇನಾದರೂ ಹುಡುಕಬೇಕು.'

ಬೈಂಡರನು ಹೆಂಗಸಿನ ಕಡೆಗೇ ನೋಡುತ್ತಾ ಸ್ವಲ್ಪ ಹೊತ್ತಿನ ವರೆಗೆ ಯೋಚಿಸುತ್ತಾ ಕುಳಿತನು. ಆ ಮೇಲೆ ಮೃದು ಸ್ವರದಿಂದ 'ನಿನಗೆ ಮನಸ್ಸಿದ್ದರೆ ನಾಳೆಯಿಂದ ಈ ಬಲಗಡೆಯ ಖಾಲಿ ಕೋಣೆಯಲ್ಲಿ ನೀನು ಬಂದು ಇಳಿದುಕೊ. ದಿನಕ್ಕೆರಡು ಸಲ ನನಗಿಷ್ಟು ಗಂಜಿ ಬೇಯಿಸಿ ಹಾಕು. ತಿಂಗಳಿಗೆ ನಾಲ್ಕು ರೂಪಾಯಿ ಕೊಡುತ್ತೇನೆ. ಅದರಿಂದ ನಿನ್ನ ಕಷ್ಟ ಸ್ವಲ್ಪ ದೂರವಾಗಲಿಕ್ಕೂ ಸಾಕು' ಎಂದನು.

ಹೆಂಗಸಿನಿಂದ ಇಷ್ಟು ದೊಡ್ಡ ಮರ್ಯಾದೆಯ ಮಾತನ್ನು ತಡೆಯಲಾಗಲಿಲ್ಲ. ಆಕೆಯ ತಲೆಯು ನಾಚಿಕೆಯಿಂದ ಬಾಗಿತು.

'ನೀವು ಬಡವಳಾದ ನನ್ನ ಮೇಲೆ ಇಷ್ಟು ಅನುಗ್ರಹಿಸಿದುದಕ್ಕಾಗಿ ನಿಮ್ಮ ಉಪಕಾರವನ್ನು ಎಂದಿಗೂ ಮರೆಯಲಾರೆನು' ಎಂದು ಹೇಳಿ ಮಗನೊಂದಿಗೆ ಹೊರಟು ಹೋದಳು.

ಈ ದಿನವು ಕೂಡ ಅವರು ಹೋದೊಡನೆಯೇ ಬೈಂಡರನಿಗೆ ಎಲ್ಲವೂ ಶೂನ್ಯವಾಗಿ ಕಂಡಿತು. ಅವನು ಯಾವುದೋ ಒಂದು ವಸ್ತುವನ್ನು ಕಳೆದು ಕೊಂಡವನಂತೆ ಬೀದಿಯ ಗಲಾಟೆಯನ್ನು ನೋಡುತ್ತಾ ಕುಳಿತು ಬಿಟ್ಟನು.

೪

ಮರುದಿನ ಆ ಹೆಂಗಸು ಒಂದು ಹಳೆಯ ಟ್ರಂಕನ್ನೂ, ವಸ್ತ್ರದ ಗಂಟನ್ನೂ, ಎರಡು ಮೂರು ಎಲ್ಯುಮಿನಿಯಮಿನ ಪಾತ್ರೆಗಳನ್ನೂ, ನಾಲ್ಕೈದು ಮಣ್ಣಿನ ಪಾತ್ರೆಗಳನ್ನೂ ಹಿಡಿದುಕೊಂಡು ಮಗನೊಂದಿಗೆ ಬೈಂಡರನಲ್ಲಿಗೆ ಬಂದಳು. ಬೈಂಡರ್ ಚಾರ್ಲಿಯ ಜೀವನದಲ್ಲಿ ಇಂದಿನಿಂದ ಒಂದು ಹೊಸ ಯುಗವು ಪ್ರಾರಂಭವಾಯಿತು.

ಬೈಂಡರನಲ್ಲಿ ಈಗ ಮೊದಲಿನ ರೂಕ್ಷತೆಯಿಲ್ಲ. ಈಗ ಅವನು ತನ್ನ ಗ್ರಾಹಕರೊಂದಿಗೆ ಬಹಳ ನಮ್ರತೆಯಿಂದ ವರ್ತಿಸುತ್ತಾನೆ. ಮಜೂರಿಯು ಕೂಡ ಮೊದಲಿನದಲ್ಲ. ಮೃದುವಾಗಿ ಮಾತಾಡುತ್ತಾನೆ. ಪ್ರೀತಿಯಿಂದ ಕೂತುಕೊಳ್ಳಲಿಕ್ಕೆ ಹೇಳುತ್ತಾನೆ.

ಪುಸ್ತಕಗಳಿಗೆ ಬೈಂಡು ಹಾಕುವಾಗ ಕೂಡ ಆತನು ಮೊದಲಿನಂತೆ ಏಕಾಗ್ರಚಿತ್ತನಾಗಿಲ್ಲ. ಮಧ್ಯೆ ಮಧ್ಯೆ ಆ ಅಡಿಗೆ ಹೆಂಗಸಿನ ಮಗನಿಗೆ ಪಾಠ ಹೇಳಿ ಕೊಡುವನು. ಬಣ್ಣದ ಕಾಗದಗಳಿಂದ ಗಾಳಿ ಪಟಗಳನ್ನೂ, ದೋಣಿಗಳನ್ನೂ ಮಾಡಿಕೊಟ್ಟು ಸ್ವಲ್ಪ ಕಾಲವನ್ನು ಕಳೆಯುವನು. ಹಬ್ಬ ಜಾತ್ರೆಗಳ ದಿನದಲ್ಲಿ ಅಂಗಡಿಗೆ ಬೀಗ ಹೆಟ್ಟಿ ಹುಡುಗನೊಂದಿಗೆ ಜಾತ್ರೆ ನೋಡಲಿಕ್ಕೆ ಹೋಗುವನು. ಅಲ್ಲಿ ಅವನಿಗೆ ಬೇಕುಬೇಕಾದ ತಿಂಡಿತಿನಸುಗಳನ್ನೂ, ಆಟದ ಸಾಮಾನುಗಳನ್ನೂ ತೆಗೆದುಕೊಡುವನು.

ಮಧ್ಯೆ ರಾತ್ರಿವರೆಗೆ ಕೆಲಸ ಮಾಡುತಿದ್ದ ಬೈಂಡರನು ಈಗ ದೀಪ ಹಚ್ಚುವ ಮೊದಲೇ ಅಂಗಡಿಯನ್ನು ಮುಚ್ಚಿ ಹೊರಗಿನ ಹಲಗೆಯ ಮೇಲೆ ಕುಳಿತುಕೊಂಡು ದಾರಿಯಲ್ಲಿ ಹೋಗುವ ಜನರನ್ನೂ, ಕಾರು ಗಾಡಿಗಳನ್ನೂ ನೋಡುತ್ತಾ ಏನನ್ನೋ ಯೋಚಿಸುತ್ತಾ ಕುಳಿತುಕೊಳ್ಳುವನು. ಏನನ್ನು ಯೋಚಿಸುತ್ತಾನೋ ಅವನಿಗೇ ಗೊತ್ತು!

ರಾತ್ರಿಯಲ್ಲಿ ಬಹಳ ಉತ್ಸುಕತೆಯಿಂದ ಊಟಕ್ಕೆ ಕೂತುಕೊಳ್ಳುವನು. ಉಣ್ಣುವಾಗ ಚಾರ್ಲಿಯು ಒಂದೊಂದಾಗಿ ಪದಾರ್ಥಗಳ ರುಚಿಯನ್ನು ವರ್ಣಿಸುವನು. ಹೆಂಗಸು ನಾಚಿಕೆಯಿಂದ ತಲೆ ಬಗ್ಗಿಸಿ ಎಡೆಎಡೆಯಲ್ಲಿ ಒಂದೊಂದು ಮಾತನ್ನಾಡುವಳು. ಆಗ ಬ್ರೈಂಡರನ ನೀರಸ ಜೀವನದಲ್ಲಿ ರಸಪ್ರವಾಹವೇ ಹರಿದಂತಾಗುವುದು. ಒಂದು ದಿನ ಉಣ್ಣುತ್ತಿರುವಾಗ ಆತನು ಹೆಂಗುಸಿನೊಡನೆ—"ಹೌದೋ, ನಿನ್ನ ಹೆಸರೇನು? ನಿನ್ನ ಹೆಸರನ್ನು ಕೇಳಲು ಮರೆತೇ ಬಿಟ್ಟೆನು. ನಾನು ನಿನ್ನನ್ನು ಯಾವ ಹೆಸರಿನಿಂದ ಕರೆಯಲಿ." ಎಂದನು.

ಹೆಂಗಸು ನಗುವಿನಿಂದಲೂ ನಾಚಿಕೆಯಿಂದಲೂ ಕೂಡಿದವಳಾಗಿ ಉತ್ತರವಿತ್ತಳು—"ಕರೆಯಿರಿ, ಫಿಲಿಪ್ಪನ ತಾಯಿ ಎಂದು ಹೇಳಿ ಕರೆಯಿರಿ!"

"ಇಲ್ಲ, ಇಲ್ಲ. ನನಗೆ ನಿನ್ನ ಹೆಸರು ಬೇಕು."

ಹೆಂಗಸು-"ತಿಳಿದು ಮಾಡುವುದೇನು?"

"ಮಾಡುವುದೇನು? ಅದೇ ಹೆಸರಿನಿಂದಲೇ ಕರೆಯುವೆನು. ಮತ್ತೇನು?"

ಹೆಂಗಸು ಒಲೆಯ ಬೆಂಕಿಯನ್ನು ಸರಿ ಮಾಡುತ್ತಾ "ನನ್ನ ಹೆಸರು ರೋಸಿ" ಎಂದಳು. ತನ್ನ ನಾಚಿಕೆಯನ್ನು ಹೋಗಲಾಡಿಸಲಿಕ್ಕಾಗಿ ಮಗನೊಡನೆ "ಮಗೂ, ಅನ್ನ ಬೇಕೊ?" ಎಂದಳು.

ಬ್ರೈಂಡರನು ಗಂಭೀರನಾಗಿ "ಒಳ್ಳೇದು, ನಾಳೆಯಿಂದ ನಾನು ನಿನ್ನನ್ನು ರೋಸಿ ಎಂದೇ ಕರೆಯುವೆನು." ಎಂದು ತನ್ನ ಉತ್ಸಾಹವನ್ನು ತೋರಿಸಿದನು. ಹೆಂಗಸಿನ ಬಿಳಿ ಮುಖವು ಕೆಂಪಾಯಿತು. ಕಣ್ಣಿನಲ್ಲಿ ಚಿಂತೆಯು ಹಬ್ಬಿತು.

"ಬೇಡ, ಬೇಡ, ಆ ಹೆಸರಿನಿಂದ ನಮ್ಮ ಯಜಮಾನರು ಕರೆಯುತ್ತಿದ್ದರು" ಎಂದು ನಿಧಾನವಾಗಿ ಹೇಳಿದಳು.

"ಹಾಗಾದರೆ ಏನಾಯಿತು?" ಬ್ರೈಂಡರನ ಮುಖದಿಂದ ಹೊರಟಿತು. ಹೆಂಗಸು ವಿಸ್ಮಯದಿಂದ ಆತನ ಮೋರೆಯನ್ನು ನೋಡತೊಡಗಿದಳು.

ಬ್ರೆಂಡರನು ಕ್ಷಣ ಹೊತ್ತು ಕುಳಿತು ತಲೆ ಕೆಳಗೆ ಮಾಡಿ "ಇದು ವಿಶುದ್ಧ ಹುಚ್ಚು" ಎಂದು ಉದ್ಗಾರ ತೆಗೆದನು.

ಸ್ತ್ರೀಯು ತನ್ನ ಉತ್ಸುಕತೆಯನ್ನು ತಡೆಯಲಾರದೆ "ಹೇಗೆ" ಎಂದಳು.

"ಏನೂ ಇಲ್ಲ."

"ಹಾಗಾದರೆ?" ಹೆಂಗಸು ಬಹಳ ಉತ್ಕಂಠೆಯಿಂದಿದ್ದಳು.

ಬ್ರೆಂಡರನು ರೋಸಿಯ ಮುಖವನ್ನೊಮ್ಮೆ ನೋಡಿ–"ನಾನು ನಿನ್ನ ಕೈ ಹಿಡಿಯಲು ಅಪೇಕ್ಷಿಸುತ್ತೇನೆ. ನಿನ್ನ ಅಭಿಪ್ರಾಯವೇನು" ಎಂದು ಕೇಳಿದನು.

ಫಿಲಿಪ್ಪನ ತಾಯಿಗೆ ಇದೊಂದು ಅಪೂರ್ವ ಸಮಸ್ಯೆಯಾಗಿ ಬಿಟ್ಟಿತು. ಇಷ್ಟರ ವರೆಗೆ, ಇಂದಿನ ವರೆಗೆ ಆಕೆಯು ಬ್ರೆಂಡರನನ್ನು ಒಬ್ಬ ಚಾಕರಿಯವಳ ರೂಪದಿಂದ ಪ್ರಸನ್ನತೆಗೊಳಿಸಲು ಪ್ರಯತ್ನ ಪಟ್ಟಿದ್ದಳು. ಆತನ ನಗೆಗೆ ತನ್ನ ನಗೆಯಿಂದ ಉತ್ತರವಿತ್ತಿದ್ದಳು. ಆದರೆ, ಇಂದು?...............

"ನನ್ನನ್ನು ಕ್ಷಮಿಸಿರಿ. ನನ್ನನ್ನು ಮುಳ್ಳ ಬಲ್ಲೆಗೆ ಎಳೆಯಬೇಡಿರಿ. ಅಭಾಗಿನಿಯಾದ ನನ್ನನ್ನು ಹೀಗೆ ಇರಲಿಕ್ಕೆ ಬಿಡಿರಿ." ಹೆಂಗಸಿನ ಮಾತು.

"ಹಾಗಾದರೆ ನೀನು ಎಷ್ಟಕ್ಕೂ ನನ್ನನ್ನು ಅಪೇಕ್ಷಿಸುವುದಿಲ್ಲವೋ?" ಬ್ರೆಂಡರನ ಮಾತಿನಲ್ಲಿ ನಿರಾಶೆಯ ಕಿರಣಗಳು ಹೊಳೆದುವು.

"ಇಲ್ಲ ಈಗಿನಂತೆಯೇ ನಿಮ್ಮ ಸೇವೆ ಮಾಡುವೆನು. ಆದರೆ ನೀವು ನನ್ನಿಂದ ನನ್ನ ಯಜಮಾನರ ನೆನಪನ್ನಪಹರಿಸಬೇಡಿ" ರೋಸಿಯು ನೀರವ ದೃಷ್ಟಿಯಿಂದ ಕರುಣಾವರ್ಷವಾಯಿತು.

ಬ್ರೆಂಡರನು ಉತ್ತೇಜಿತನಾಗಿ ಆವೇಶದಿಂದ ಮಾತಾಡಿದನು— "ಇಷ್ಟರ ವರೆಗೆ ಈ ನನ್ನ ಜೀವನವು ಈ ಲೋಕದಿಂದ ಯಾವ ವಸ್ತುವನ್ನೂ ಪಡೆಯಲಿಲ್ಲ. ಈಗ ಕೇವಲ ನಿನ್ನನ್ನು ಅಪೇಕ್ಷಿಸಿದೆನು. ನೀನು ನನ್ನ ಆಶೆಯನ್ನು ಚೂರು ಚೂರು ಮಾಡಲು ಇಚ್ಛಿಸುವೆಯಾದರೆ, ಹೇಳು. ಅದೂ ಈಗಲೇ ಆಗಲಿ. ಇಲ್ಲವೆಂದು ಹೇಳು, ಹೇಳು!"

ರೋಸಿ ದೃಢತೆಯನ್ನು ತಾಳಿ ನಿಧಾನವಾಗಿ "ಹಾಂ" ಎಂದಳು.

ಬ್ರೈಂಡರನು ನಿರುತ್ತರನಾದನು.

ಪ್ರಾರಂಭದಲ್ಲಿ ಬ್ರೈಂಡರನು ಕಠಿಣನಾಗಿದ್ದನು, ಅಂತ್ಯದಲ್ಲಿ ರೋಸಿಯು!

ooo ooo ooo

ಬ್ರೈಂಡರನು ಈಗಲೂ ಬ್ರೈಂಡಿನ ಕೆಲಸ ಮಾಡುತ್ತಾನೆ. ಈಗಲೂ ಗ್ರಾಹಕರು ಬರುತ್ತಾರೆ! ಆದರೆ ಮೊದಲಿನಷ್ಟು ಈಗ ಬ್ರೈಂಡಿನ ಕೆಲಸ ಮಾತ್ರ ಒಳ್ಳೆಯದಾಗುವುದಿಲ್ಲ.